SINCE 1962

DAVANGERE
URBAN CO-OPERATIVE BANK LTD.

# 61 ನೇ ವಾರ್ಷಿಕ ವರದಿ
## 2021-22




# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ.,


ಪ್ರಧಾನ ಕಛೇರಿ : ಅಂಚೆ ಪೆಟ್ಟಿಗೆ ನಂ. 217, ಗಾಂಧಿ ಸರ್ಕಲ್ ಹತ್ತಿರ,
ಪಿ.ಬಿ. ರಸ್ತೆ, ದಾವಣಗೆರೆ – 577 002.

# ಕಾರ್ಯನಿರ್ವಾಹಕ ಮಂಡಳಿ ಸದಸ್ಯರು



**ಶ್ರೀ ಕೋಗುಂಡಿ ಬಕ್ಕೇಶಪ್ಪ**
ಅಧ್ಯಕ್ಷರು



**ಶ್ರೀ ಅಂದನೂರು ಮುಪ್ಪಣ್ಣ**
ಉಪಾಧ್ಯಕ್ಷರು



**ಶ್ರೀ ಬಿ.ಸಿ. ಉಮಾಪತಿ**
ನಿರ್ದೇಶಕರು



**ಶ್ರೀ ಮತ್ತಿಹಳ್ಳಿ ವೀರಣ್ಣ**
ನಿರ್ದೇಶಕರು



**ಶ್ರೀ ಪಲ್ಲಾಗಟ್ಟಿ ಶಿವಾನಂದಪ್ಪ**
ನಿರ್ದೇಶಕರು



**ಶ್ರೀ ಎಂ. ಚಂದ್ರಶೇಖರ್**
ನಿರ್ದೇಶಕರು



**ಶ್ರೀ ಟಿ.ಎಸ್. ಜಯರುದ್ರೇಶ್**
ನಿರ್ದೇಶಕರು ಹಾಗೂ
ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರು



**ಶ್ರೀ ದೇವರಮನಿ ಶಿವಕುಮಾರ್**
ನಿರ್ದೇಶಕರು ಹಾಗೂ
ವ್ಯವಸ್ಥಾಪನಾ ಮಂಡಳಿ ಸದಸ್ಯರು



**ಶ್ರೀ ಅಜ್ಜಂಪುರಶೆಟ್ರು ವಿಜಯಕುಮಾರ್**
ನಿರ್ದೇಶಕರು



**ಶ್ರೀಮತಿ ಸುರೇಖಾ ಎಂ. ಚಿಗಟೇರಿ**
ನಿರ್ದೇಶಕರು



**ಶ್ರೀ ಕಂಚಿಕೇರಿ ಮಹೇಶ್**
ನಿರ್ದೇಶಕರು ಹಾಗೂ
ವ್ಯವಸ್ಥಾಪನಾ ಮಂಡಳಿ ಸದಸ್ಯರು



**ಶ್ರೀ ನಲ್ಲೂರು ಎಸ್. ರಾಘವೇಂದ್ರ**
ನಿರ್ದೇಶಕರು



**ಶ್ರೀ ಇ.ಎಂ. ಮಂಜುನಾಥ**
ನಿರ್ದೇಶಕರು



**ಶ್ರೀ ವಿ. ವಿಕ್ರಮ್**
ನಿರ್ದೇಶಕರು



**ಶ್ರೀಮತಿ ಎ.ಆರ್. ಅರ್ಚನ**
ನಿರ್ದೇಶಕರು

## -: ವೃತ್ತಿಪರ ನಿರ್ದೇಶಕರು :-



**ಶ್ರೀ ಮುಂಡಾಸ್ ವೀರೇಂದ್ರ**
ಚಾರ್ಟರ್ಡ್ ಅಕೌಂಟೆಂಟ್



**ಶ್ರೀ ಮಲ್ಲಿಕಾರ್ಜುನ ಕಣವಿ**
ವಕೀಲರು

## -: ವ್ಯವಸ್ಥಾಪನಾ ಮಂಡಳಿ ಸದಸ್ಯರು :-



**ಶ್ರೀ ಬಸವರಾಜಪ್ಪ ಬೆಳಗಾವಿ**
ಚಾರ್ಟರ್ಡ್ ಅಕೌಂಟೆಂಟ್



**ಶ್ರೀ ಜಂಬಿಗಿ ರಾಧೇಶ್**
ತೆರಿಗೆ ಸಲಹೆಗಾರರು



**ಶ್ರೀ ಕೆ. ಕೊಟ್ರೇಶ್**
ಸಾಫ್ಟ್‌ವೇರ್ ಇಂಜಿನಿಯರ್

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ.



ಶ್ರೀ ಕೋಗುಂಡಿ ಬಕ್ಕೇಶಪ್ಪ
ಅಧ್ಯಕ್ಷರು



ಶ್ರೀ ಅಂದನೂರು ಮುಪ್ಪಣ್ಣ
ಉಪಾಧ್ಯಕ್ಷರು

**ಸನ್ಮಾನ್ಯ ಸಹಕಾರಿ ಬಂಧುಗಳೇ,**

ನಮ್ಮ ಬ್ಯಾಂಕಿನ 61ನೇ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಬ್ಯಾಂಕಿನ ಕಾರ್ಯನಿವಾಹಕ ಮಂಡಲಿ ಪರವಾಗಿ ಸ್ವಾಗತಿಸುತ್ತೇವೆ.

2021-22ನೇ ಸಾಲಿನ ವಾರ್ಷಿಕ ವರದಿ, ಲಾಭ-ನಷ್ಟ ಮತ್ತು ಅಢಾವೆ ಪತ್ರಿಕೆಗಳನ್ನು ಈಗಾಗಲೇ ತಮ್ಮ ಪರಿಶೀಲನೆಗಾಗಿ ಕಳುಹಿಸಲಾಗಿದೆ. ಬ್ಯಾಂಕಿನ ಆರ್ಥಿಕ ಪ್ರಗತಿಯು ನಿಮ್ಮೆಲ್ಲರ ಸಹಕಾರದಿಂದ ಪ್ರಗತಿ ಹೊಂದಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಬ್ಯಾಂಕಿನ ಲಾಭವು ರೂ. 10.10 ಕೋಟಿಗೂ ಮೀರಿದ್ದು, ಕಳೆದ ಸಾಲಿಗಿಂತ ರೂ. 0.91 ಲಕ್ಷ ಹೆಚ್ಚಿಗೆಯಾಗಿರುತ್ತದೆ. ಠೇವಣಿಗಳು ಸುಮಾರು ರೂ. 472 ಕೋಟಿಗೂ ಮೀರಿದ್ದು, ಕಳೆದ ವರ್ಷಕ್ಕಿಂತ ರೂ. 38 ಕೋಟಿಯಷ್ಟು ಹೆಚ್ಚಾಗಿರುತ್ತದೆ. ಸಾಲಗಳು ರೂ. 296 ಕೋಟಿಗೂ ಮೀರಿದ್ದು ಹಿಂದಿನ ವರ್ಷಕ್ಕಿಂತ ರೂ. 28 ಕೋಟಿಯಷ್ಟು ಹೆಚ್ಚಾಗಿದೆ. ಬ್ಯಾಂಕಿನ ದುಡಿಯುವ ಬಂಡವಾಳವು ರೂ. 553 ಕೋಟಿಗೂ ಮೀರಿ ಹಿಂದಿನ ವರ್ಷಕ್ಕಿಂತ ರೂ. 44 ಕೋಟಿಯಷ್ಟು ವೃದ್ಧಿಯಾಗಿ ಬ್ಯಾಂಕ್ ಪ್ರಗತಿ ಸಾಧಿಸಿದೆ ಎಂದು ತಿಳಿಸಲು ಸಂತೋಷವಾಗುತ್ತದೆ.

ಜಾಗತೀಕರಣ ಮತ್ತು ಖಾಸಗೀಕರಣದ ಹಿನ್ನೆಲೆಯಲ್ಲಿ ಮೂರು ದಶಕಗಳಿಂದೀಚೆಗೆ ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವೃತ್ತಿಪರತೆ, ಪಾರದರ್ಶಕತೆ, ಉತ್ತರದಾಯಿತ್ವ, ತಾಂತ್ರೀಕತೆ, ಗ್ರಾಹಕ ಸೇವೆ, ಲಾಭದಾಯಕತೆ ಇನ್ನು ಮುಂತಾದ ಪ್ರಮುಖ ವಿಷಯಗಳಲ್ಲಿ ಅನೇಕ ಸುಧಾರಣೆಗಳಾಗಿವೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಈಗಿನ ಸ್ಪರ್ಧಾತ್ಮಕ ಯುಗದಲ್ಲಿ, ಸಹಕಾರ ಬ್ಯಾಂಕುಗಳು ರಾಷ್ಟ್ರೀಯ ಮತ್ತು ವಾಣಿಜ್ಯ ಬ್ಯಾಂಕುಗಳೊಂದಿಗೆ ಪೈಪೋಟಿ ನಡೆಸಲು ಆಧುನಿಕ ಬ್ಯಾಂಕಿಂಗ್ ತಂತ್ರಾಂಶದ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ. ಸಹಕಾರಿ ಬ್ಯಾಂಕುಗಳು ಕಾಯಿದೆ, ನಿಯಮ ಮತ್ತು ರಿಸರ್ವ್ ಬ್ಯಾಂಕಿನ ನಿರ್ದೇಶನಗಳತ್ತ ಹೆಚ್ಚು ಗಮನಹರಿಸಬೇಕಾದ ಅನಿವಾರ್ಯತೆ ಒಂದೆಡೆಯಿದ್ದರೆ, ಇನ್ನೊಂದೆಡೆ ವ್ಯವಹಾರ ಅಭಿವೃದ್ಧಿ, ವೈವಿಧ್ಯತೆ ಮತ್ತು ಲಾಭದಾಯಕತೆ ಕಡೆ ಗಮನ ನೀಡಬೇಕಾದ ಅವಶ್ಯಕತೆಯಿದೆ.

ಕಳೆದೆರೆಡು ವರ್ಷಗಳಿಂದ ಕರೋನ ಸಾಂಕ್ರಾಮಿಕ ರೋಗದಿಂದಾಗಿ ದೇಶದೆಲ್ಲೆಡೆ ಸಂಕಷ್ಟದ ಪರಿಸ್ಥಿತಿಯಲ್ಲಿ ನಮ್ಮ ಬ್ಯಾಂಕು ಲಾಭದ ಕಡೆ ಒತ್ತು ನೀಡದೆ. ನಮ್ಮ ಗ್ರಾಹಕರಿಗೆ ಶೇಕಡ 1 ರಷ್ಟು ಬಡ್ಡಿಯಲ್ಲಿ ಕಡಿಮೆ ಮಾಡಲಾಗಿತ್ತು, ಗ್ರಾಹಕರೂ ಕೂಡ ಇದರ ಸದುಪಯೋಗ ಪಡೆದುಕೊಂಡು ಸಕಾಲಕ್ಕೆ ಬಡ್ಡಿಯನ್ನು ಕಟ್ಟಿ ಸಹಕರಿಸಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಬ್ಯಾಂಕು ಕರೋನ ರೋಗ ಪೀಡಿತರ ಜೀವ ರಕ್ಷಣೆಗಾಗಿ ಆಮ್ಲಜನಕ ಅವಶ್ಯವಾಗಿರುವುದನ್ನು ಗಮನಿಸಿ ತಯಾರಿಕಾ ಘಟಕಕ್ಕೆ ಆರ್ಥಿಕ ಸಹಾಯ ಮಾಡಿ ಸಾಮಾಜಿಕ ಕಳಕಳಿಯಲ್ಲೂ ಮುಂಚೂಣಿಯಲ್ಲಿದೆ ಎಂದು ತಿಳಿಸಲು ಹರ್ಷವಾಗುತ್ತದೆ.

ಬ್ಯಾಂಕಿಂಗ್‌ನಲ್ಲಿ ಡಿಜಿಟಲ್ ತಂತ್ರಜ್ಞಾನದ ಆವಶ್ಯಕತೆಯನ್ನು ಅರಿತು IMPS (Immediate Payment Service) ಶ್ರೀಘ್ರದಲ್ಲಿ ಲೋಕಾರ್ಪಣೆಗೊಳ್ಳಲಿದೆ ಅಲ್ಲದೇ ನಮ್ಮ ಬ್ಯಾಂಕಿನ ಮೊಬೈಲ್ ಆ್ಯಪ್‌ನಲ್ಲಿ RTGS/NEFT ನ್ನು ಮಾಡಲು ಅವಕಾಶವನ್ನು ನೀಡಿದ್ದು ತಾವು ಇದರ ಸದುಪಯೋಗವನ್ನು ಪಡೆದುಕೊಳ್ಳಲು ಕೋರುತ್ತೇವೆ ಹಾಗೂ ಬ್ಯಾಂಕಿನ 4 ಸ್ವಂತ ಕಟ್ಟಡಗಳಲ್ಲಿ 'ಸೋಲಾರ್ ಪ್ಯಾನಲ್' ಅಳವಡಿಸಲಾಗಿದ್ದು ಇದರಿಂದ ವಿದ್ಯುತ್‌ಚ್ಛಕ್ತಿ ವೆಚ್ಚದಲ್ಲಿ ಉಳಿತಾಯವಾಗಿರುವುದು ಗಮನಾರ್ಹವಾಗಿದೆ.

**ನಿಮ್ಮ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ನಿಮ್ಮ ಸಹಕಾರ ಸದಾ ಇರಲಿ ಎಂದು ವಿನಂತಿಸುತ್ತೇವೆ.**

**ಕಾರ್ಯನಿರ್ವಾಹಕ ಮಂಡಲಿಯ ಪರವಾಗಿ**

ಸಹಿ/-
**ಕೋಗುಂಡಿ ಬಕ್ಕೇಶಪ್ಪ**
ಅಧ್ಯಕ್ಷರು

ಸಹಿ/-
**ಅಂದನೂರು ಮುಪ್ಪಣ್ಣ**
ಉಪಾಧ್ಯಕ್ಷರು

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ.

## 61ನೇ ವಾರ್ಷಿಕ ಮಹಾಸಭೆಯ ನೋಟೀಸ್

ಬ್ಯಾಂಕಿನ 2021-22ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 11-09-2022ನೇ ಭಾನುವಾರದಂದು ಬೆಳಿಗ್ಗೆ 11-30 ಘಂಟೆಗೆ ನಗರದ ಶ್ರೀ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆಸಲಾಗುವುದು, ಮಾನ್ಯ ಸದಸ್ಯರು ಸಕಾಲಕ್ಕೆ ಸಭೆಗೆ ಆಗಮಿಸಬೇಕಾಗಿ ಕೋರಿದೆ.

### -: ಸಭೆಯ ಕಾರ್ಯಸೂಚಿ :-

1. ಪ್ರಾರ್ಥನೆ
2. ದಿನಾಂಕ 23-10-2021 ರಂದು ನಡೆದ 60ನೇ ವಾರ್ಷಿಕ ಮಹಾಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು.
3. ಕಾರ್ಯನಿರ್ವಾಹಕ ಮಂಡಲಿಯವರು ತಯಾರಿಸಿರುವ 61ನೇ ವಾರ್ಷಿಕ ವರದಿಯನ್ನು (2021-22) ಪರಿಶೀಲಿಸುವುದು.
4. ದಿನಾಂಕ 31-03-2022ಕ್ಕೆ ಅಂತ್ಯವಾಗುವ ವರ್ಷದ ಲಾಭ-ನಷ್ಟ ಮತ್ತು ಅಢಾವೆ ಪತ್ರಿಕೆ ಪರಿಶೀಲನೆ ಮತ್ತು 2021-22ನೇ ಸಾಲಿನ ಲೆಕ್ಕ ಪರಿಶೋಧನ ವರದಿಯಲ್ಲಿ ಸೂಚಿತ ನ್ಯೂನ್ಯತೆಗಳಿಗೆ ಕಾರ್ಯನಿರ್ವಾಹಕ ಮಂಡಲಿಯು ನೀಡಿರುವ ಅನುಪಾಲನಾ ವರದಿಯ ಪರಿಗಣನೆ.
5. 2021-22ನೇ ಸಾಲಿನ ಆಯವ್ಯಯದ ಅಂದಾಜಿಗಿಂತ ಹೆಚ್ಚುವರಿ ಆದ ಖರ್ಚುಗಳನ್ನು ಒಪ್ಪುವುದು ಮತ್ತು 2022-23ನೇ ಸಾಲಿಗೆ ಆಯವ್ಯಯ ಮಂಜೂರು ಮಾಡುವುದು.
6. 2021-22ನೇ ಸಾಲಿನ ಲಾಭ ವಿಲೇವಾರಿ ಮಾಡುವುದು.
7. ನಿರ್ದೇಶಕ ಮಂಡಲಿಯು 2022-23ನೇ ಸಾಲಿಗೆ ರೂಪಿಸಿದ ಕಾರ್ಯಚಟುವಟಿಕೆಗಳನ್ನು ಅನುಮೋದಿಸುವುದು
8. 2022-23ನೇ ಸಾಲಿಗೆ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲಗಳ ಗರಿಷ್ಠ ಮಿತಿಯನ್ನು ನಿಗದಿಪಡಿಸುವುದು.
9. 2022-2023 ನೇ ಸಾಲಿನ ಬ್ಯಾಂಕಿನ ಸನ್ನದು ಲೆಕ್ಕ ಪರಿಶೋಧಕರ ನೇಮಕಾತಿಯು ಆರ್.ಬಿ.ಐ ಇವರಿಂದ ಅನುಮೋದನೆಗೊಂಡಿರುವುದನ್ನು ಸ್ಥಿರಿಕರಿಸುವುದು.
10. ಬ್ಯಾಂಕಿನ ಉಪನಿಯಮಗಳ ತಿದ್ದುಪಡಿಯನ್ನು ಅನುಮೋದಿಸುವುದು.
11. ಬ್ಯಾಂಕಿನ ಅಧಿಕೃತ ಷೇರು ಬಂಡವಾಳ ಮಿತಿಯನ್ನು ಹೆಚ್ಚಿಸಿ ನಿಗಧಿಪಡಿಸುವುದು.
12. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

ದಿನಾಂಕ :22-08-2022

ಕಾರ್ಯನಿರ್ವಾಹಕ ಮಂಡಲಿ ಪರವಾಗಿ

(ಡಿ.ವಿ. ಆರಾಧ್ಯಮಠ)
ಪ್ರಧಾನ ವ್ಯವಸ್ಥಾಪಕರು

**ಸೂಚನೆ :** ಪ್ರಕಟಿತ ಆಸ್ತಿ-ಜವಾಬ್ದಾರಿ ತಃಖ್ತೆ ಅಥವಾ ಅದಕ್ಕೆ ಸಂಬಂಧಪಟ್ಟ ತಃಖ್ತೆಗಳ ಬಗ್ಗೆ ಇತರೆ ಯಾವುದೇ ವಿಷಯದ ಬಗ್ಗೆ ಸುಸ್ತಿದಾರರಲ್ಲದ ಸದಸ್ಯರು ಸ್ಪಷ್ಟೀಕರಣ ಬಯಸಿದಲ್ಲಿ ಸಭೆಯು ನಡೆಯುವುದಕ್ಕೆ 3 ದಿವಸ ಮುಂಚಿತವಾಗಿ ಬ್ಯಾಂಕಿಗೆ ಲಿಖಿತವಾಗಿ ತಿಳಿಸತಕ್ಕದ್ದು, ಅಧ್ಯಕ್ಷರ ಅನುಮತಿ ಮೇರೆಗೆ ಬಂದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಬಹುದಾಗಿದೆ. ನಂತರ ಬಂದ ವಿಷಯವನ್ನು ಪ್ರಸ್ತಾಪಿಸಲು ಅವಕಾಶವಿರುವುದಿಲ್ಲ. ಸದಸ್ಯರು ಮಹಾಸಭೆಗೆ ಬರುವಾಗ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕಾಗಿ ವಿನಂತಿ.

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ.

## 2021-2022ನೇ ಸಾಲಿನ ವಾರ್ಷಿಕ ವರದಿ

**ಸನ್ಮಾನ್ಯ ಸಹಕಾರಿ ಬಂಧುಗಳೇ,**

ನಮ್ಮ ಬ್ಯಾಂಕಿನ 61ನೇ ವರ್ಷದ ಈ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, 2021-22ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದೆ ಮಂಡಿಸುತ್ತೇವೆ. ನಮ್ಮ ಬ್ಯಾಂಕು ಈ ವರ್ಷವೂ ಸಹ ಠೇವಣಿ ಸಂಗ್ರಹಣೆ, ಸಾಲ ನೀಡುವಿಕೆಯಲ್ಲಿ, ದುಡಿಯುವ ಬಂಡವಾಳ, ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳಲ್ಲಿ ಉತ್ತಮ ಪ್ರಗತಿ ಸಾಧಿಸಿದೆ ಎಂದು ತಿಳಿಸಲು ಅತ್ಯಂತ ಸಂತಸಪಡುತ್ತೇವೆ.

### ಆರ್ಥಿಕ ಪ್ರಗತಿ

(ರೂ. ಕೋಟಿಗಳಲ್ಲಿ)

| ವಿವರಗಳು | 31-03-2022 ರೂ. | 31-03-2021 ರೂ. | ಹೆಚ್ಚುವರಿಯಾದದ್ದು ರೂ. | ಶೇಕಡವಾರು ಪ್ರಮಾಣ % |
|---|---|---|---|---|
| 1. ಷೇರು ಬಂಡವಾಳ | **11.74** | 11.28 | 0.46 | 4.08% |
| 2. ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು | **57.73** | 52.92 | 4.81 | 9.09% |
| 3. ಠೇವಣಿಗಳು | **472.17** | 434.53 | 37.64 | 8.66% |
| 4. ಸಾಲಗಳು | **296.62** | 268.83 | 27.79 | 10.34% |
| 5. ದುಡಿಯುವ ಬಂಡವಾಳ | **552.96** | 508.93 | 44.03 | 8.65% |
| 6. ಲಾಭ (ತೆರಿಗೆ ಹಾಗೂ ಇತರೆ ಅವಕಾಶ ಕಲ್ಪಿಸುವ ಮೊದಲು) | **10.10** | **9.19** | **0.91** | **9.90%** |

**1. ಷೇರು ಬಂಡವಾಳ :**

ವರ್ಷದ ಪ್ರಾರಂಭದಲ್ಲಿದ್ದ ಷೇರು ಬಂಡವಾಳ ರೂ. **11.28** ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ. **11.74** ಕೋಟಿಯಷ್ಟಾಗಿ ರೂ. **46** ಲಕ್ಷ ಸಂಗ್ರಹಣೆಯಲ್ಲಿ ಹೆಚ್ಚಾಗಿದೆ.

**2. ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು :**

ವರ್ಷದ ಪ್ರಾರಂಭದಲ್ಲಿ ನಿಧಿಗಳ ಮೊತ್ತವು ರೂ. **52.92** ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ. **57.73** ಕೋಟಿ ಆಗಿ, ವರದಿ ಸಾಲಿನಲ್ಲಿ ರೂ. **4.81** ಕೋಟಿ ಹೆಚ್ಚಿಗೆಯಾಗಿರುತ್ತದೆ. ಇದರಿಂದಾಗಿ ಬ್ಯಾಂಕು ತನ್ನ ಸ್ವಂತ ನಿಧಿಗಳನ್ನು ಹೆಚ್ಚಿಸಿಕೊಂಡಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

**3. ಠೇವಣಿಗಳು :**

ಬ್ಯಾಂಕಿನ ಮೇಲೆ ಸಾರ್ವಜನಿಕರು ಮತ್ತು ಸದಸ್ಯರು ಇರಿಸಿದ ಅಪಾರ ವಿಶ್ವಾಸ ಹಾಗೂ ಬ್ಯಾಂಕು ತನ್ನ ಗ್ರಾಹಕರಿಗೆ ನೀಡುತ್ತಿರುವ ಸೇವೆಗಳಿಂದಾಗಿ, ಕಳೆದ ವರ್ಷದ ಪ್ರಾರಂಭದಲ್ಲಿದ್ದ ರೂ. **434.53** ಕೋಟಿ ಠೇವಣಿಗಳು, ವರ್ಷಾಂತ್ಯಕ್ಕೆ ರೂ. **472.17** ಕೋಟಿ ಆಗಿ, ರೂ. **37.64** ಕೋಟಿ ಹೆಚ್ಚಿಗೆಯಾಗಿರುತ್ತದೆ.

### ಶಾಖಾವಾರು ಠೇವಣಿಗಳ ವಿವರಗಳು

(ರೂ. ಕೋಟಿಗಳಲ್ಲಿ)

| ಶಾಖೆಗಳು | 31-03-2022 ರೂ. | 31-03-2021 ರೂ. | ಹೆಚ್ಚಿಗೆ / ಕಡಿಮೆ |
|---|---|---|---|
| ಪ್ರಧಾನ ಕಛೇರಿ | **173.55** | 160.89 | 12.66 |
| ಚೌಕಿಪೇಟೆ | **90.49** | 86.32 | 4.17 |
| ನರಸರಾಜ ರಸ್ತೆ | **60.35** | 53.24 | 7.11 |
| ಪಿ.ಜೆ. ಬಡಾವಣೆ | **90.57** | 81.26 | 9.31 |
| ದೇ. ಅರಸ್ ಬಡಾವಣೆ | **44.64** | 41.44 | 3.20 |
| ಹೊನ್ನಾಳಿ. | **12.57** | 11.38 | 1.19 |
| ಒಟ್ಟು | **472.17** | **434.53** | **37.64** |

4. **ಸಾಲ ಮತ್ತು ಮುಂಗಡಗಳು :**

ಕಳೆದ ವರ್ಷದ ಕೊನೆಯಲ್ಲಿ ರೂ. **268.83** ಕೋಟಿ ಇದ್ದ ಸಾಲಗಳು, ಈ ಸಾಲಿನ ಅಂತ್ಯಕ್ಕೆ ರೂ. **296.62** ಕೋಟಿ ಆಗಿದ್ದು, ಹಿಂದಿನ ವರ್ಷಕ್ಕಿಂತ ರೂ. **27.79** ಕೋಟಿ ಹೆಚ್ಚಿಗೆಯಾಗಿರುತ್ತದೆ.

**ಶಾಖಾವಾರು ಸಾಲಗಳ ವಿವರಗಳು** (ರೂ. ಕೋಟಿಗಳಲ್ಲಿ)

| ಶಾಖೆಗಳು | 31–03–2022 ರೂ. | 31–03–2021 ರೂ. | ಹೆಚ್ಚಿಗೆ / ಕಡಿಮೆ |
|---|---|---|---|
| ಪ್ರಧಾನ ಕಛೇರಿ | **116.56** | 116.44 | 0.12 |
| ಚೌಕಿಪೇಟೆ | **47.75** | 41.36 | 6.39 |
| ನರಸರಾಜ ರಸ್ತೆ | **40.14** | 34.28 | 5.86 |
| ಪಿ.ಜೆ. ಬಡಾವಣೆ | **41.13** | 36.54 | 4.59 |
| ದೇ. ಅರಸ್ ಬಡಾವಣೆ | **40.92** | 32.00 | 8.92 |
| ಹೊನ್ನಾಳಿ. | **10.12** | 8.21 | 1.91 |
| ಒಟ್ಟು | **296.62** | **268.83** | **27.79** |

5. **ದುಡಿಯುವ ಬಂಡವಾಳ :**

ಹಣಕಾಸು ವರ್ಷದ ಪ್ರಾರಂಭದಲ್ಲಿ ದುಡಿಯುವ ಬಂಡವಾಳ ರೂ. **508.93** ಕೋಟಿ ಇದ್ದದ್ದು, ವರ್ಷಾಂತ್ಯಕ್ಕೆ ರೂ. **552.96** ಕೋಟಿ ಆಗಿ ರೂ. **44.03** ಕೋಟಿ ಹೆಚ್ಚಿಗೆಯಾಗಿರುತ್ತದೆ.

6. **ಸದಸ್ಯರು :**

ವರ್ಷದ ಪ್ರಾರಂಭದಲ್ಲಿದ್ದ ಬ್ಯಾಂಕಿನ ಸದಸ್ಯರ ಸಂಖ್ಯೆ **15419** ಪ್ರಸಕ್ತ ಸಾಲಿನಲ್ಲಿ ಹೊಸದಾಗಿ **285** ಜನ ಸದಸ್ಯತ್ವ ಪಡೆದಿದ್ದು, **388** ಜನ ಸದಸ್ಯತ್ವ ಹಿಂದಕ್ಕೆ ಪಡೆದಿದ್ದಾರೆ. ವರ್ಷದ ಕೊನೆಯಲ್ಲಿ ಇದ್ದ ಬ್ಯಾಂಕಿನ ಒಟ್ಟು ಸದಸ್ಯರ ಸಂಖ್ಯೆ **15316**

7. **ಬ್ಯಾಂಕಿನ ಹೂಡಿಕೆಗಳು / ಸಂಚಯಗಳು :**

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಪ್ರಕಾರ ಹೂಡಿಕೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತೆಗಳಲ್ಲಿ, ವಿವಿಧ ಬ್ಯಾಂಕ್‌ಗಳ ಖಾಯಂ ಠೇವಣಿಗಳಲ್ಲಿ ಹಾಗೂ ಇತರೆ ಹಣಕಾಸು ಸಂಸ್ಥೆಗಳಲ್ಲಿ ಲಾಭದಾಯಕವಾಗಿ ತೊಡಗಣೆ ಮಾಡಿದ್ದು, ವರದಿ ಸಾಲಿನಲ್ಲಿ ರೂ. **222.90** ಕೋಟಿ ಹೂಡಿಕೆ ಮಾಡಲಾಗಿದೆ. ನಗದು ಮೀಸಲು ಮತ್ತು ಶಾಸನಬದ್ಧ ಮೀಸಲು ನಿಧಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನೀತಿ ನಿರ್ದೇಶನದಂತೆ ನಿರ್ವಹಣೆ ಮಾಡಲಾಗಿದೆ.

8. **ಸಾಲ ವಸೂಲಾತಿ ಮತ್ತು ಅನುತ್ಪಾದಕ ಆಸ್ತಿ ಪ್ರಮಾಣ :**

ಸದಸ್ಯರುಗಳ ಸಹಕಾರ ಮತ್ತು ಸಿಬ್ಬಂದಿ ವರ್ಗದವರ ಹಾಗೂ ಕಾರ್ಯನಿರ್ವಾಹಕ ಮಂಡಲಿಯವರ ನಿರಂತರ ಪ್ರಯತ್ನದಿಂದ ಅನುತ್ಪಾದಕ ಸಾಲಗಳ ಮತ್ತು ಕಟ್ಟು ಬಾಕಿ ಸಾಲಗಳ ವಸೂಲಾತಿ ಕಾರ್ಯವನ್ನು ಯೋಜನಾಬದ್ಧವಾಗಿ ನಡೆಸಿದ್ದರಿಂದ ಅನುತ್ಪಾದಕ ಸಾಲಗಳ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಲು ಸಾಧ್ಯವಾಗಿದ್ದು ಬ್ಯಾಂಕಿನ ಪ್ರಶಂಸಾರ್ಹ ಪ್ರಗತಿಗೆ ಕಾರಣವಾಗಿದೆ. ಕಟ್ಟುಬಾಕಿ ಪ್ರಮಾಣ ಶೇಕಡ **1.38** ರಷ್ಟಿದ್ದು ಬ್ಯಾಂಕು ಸತತವಾಗಿ **0%** ನಿವ್ವಳ ಎನ್.ಪಿ.ಎ. (ಅನುತ್ಪಾದಕ ಆಸ್ತಿ) ಹೊಂದಿರುವುದು ಬ್ಯಾಂಕಿನ ಸದೃಢತೆಯನ್ನು ಪ್ರತಿಬಿಂಬಿಸುತ್ತದೆ.

**9. ಲಾಭ :**

ಪ್ರಸ್ತುತ ವರ್ಷ ಬ್ಯಾಂಕು ರೂ. **10,09,61,367-69** ಲಾಭ ಗಳಿಸಿದ್ದು, ಶಾಖಾವಾರು ಲಾಭಗಳ ವಿವರ ಈ ಕೆಳಕಂಡಂತಿದೆ.

**ಶಾಖಾವಾರು ಲಾಭದ ವಿವರಗಳು** (ರೂ. ಕೋಟಿಗಳಲ್ಲಿ)

| ಶಾಖೆಗಳು | 31-03-2022 ರೂ. | 31-03-2021 ರೂ. | ಹೆಚ್ಚಿಗೆ / ಕಡಿಮೆ |
|---|---|---|---|
| ಪ್ರಧಾನ ಕಛೇರಿ | **3.51** | 3.25 | 0.26 |
| ಚೌಕಿಪೇಟೆ | **2.15** | 2.17 | -0.02 |
| ನರಸರಾಜ ರಸ್ತೆ | **1.53** | 1.52 | 0.01 |
| ಪಿ.ಜೆ. ಬಡಾವಣೆ | **1.66** | 1.32 | 0.34 |
| ದೇ. ಅರಸ್ ಬಡಾವಣೆ | **1.07** | 0.91 | 0.16 |
| ಹೊನ್ನಾಳಿ. | **0.18** | 0.02 | 0.16 |
| ಒಟ್ಟು | **10.10** | **9.19** | **0.91** |

**10. 2021-22ನೇ ಸಾಲಿನ ಲಾಭ ವಿಭಾಗಣೆ :-**

ಪ್ರಸ್ತುತ ವರ್ಷ ಬ್ಯಾಂಕು ರೂ. **10,09,61,367-69** ಲಾಭ ಗಳಿಸಿದ್ದು, ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ ರೂ. **5,53,63,826-69** ನಿವ್ವಳ ಲಾಭ ಗಳಿಸಿದೆ. ತಮ್ಮೆಲ್ಲರ ಒಪ್ಪಿಗೆ ಪಡೆದು ನಿವ್ವಳ ಲಾಭವನ್ನು ಈ ಕೆಳಕಾಣಿಸಿದಂತೆ ವಿಂಗಡಣೆ ಮಾಡಲು ಕಾರ್ಯಕಾರಿ ಮಂಡಲಿ ನಿರ್ಣಯಿಸಿದೆ.

| ಕ್ರ ಸಂ. | ನಿಧಿಗಳು | 31-03-2022 ರೂ. | ಲಾಭ ವಿಭಾಗಣೆ | ಲಾಭ ವಿಭಾಗಣೆ ನಂತರ ನಿಧಿಗಳು |
|---|---|---|---|---|
| 1. | ಮೀಸಲು ನಿಧಿ ಶೇ. 30 ರಂತೆ | 26,83,48,930-47 | 1,66,09,148-69 | 28,49,58,079-16 |
| 2. | ಸಹಕಾರ ಶಿಕ್ಷಣ ನಿಧಿಗೆ ಶೇ. 2 ರಂತೆ* | - | 7,75,094-00 | - |
| 3. | ಸಹಕಾರ ಅಭಿವೃದ್ಧಿ ನಿಧಿಗೆ ಶೇ. 1 ರಂತೆ* | - | 3,87,547-00 | - |
| 4. | ಸದಸ್ಯರ ಷೇರಿನ ಮೇಲೆ ಡಿವಿಡೆಂಡ್ ಶೇ. 15 ರಂತೆ* | - | 1,71,11,700-00 | - |
| 5. | ಕರಡು ಸಾಲದ ನಿಧಿಗೆ | 9,50,00,000-00 | 62,00,000-00 | 10,12,00,000-00 |
| 6. | ಕಟ್ಟಡ ನಿಧಿಗೆ | 4,60,00,000-00 | 10,00,000-00 | 4,70,00,000-00 |
| 7. | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 3,65,00,000-00 | 5,00,000-00 | 3,70,00,000-00 |
| 8. | ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 3,00,00,000-00 | 1,00,00,000-00 | 4,00,00,000-00 |
| 9. | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 10,68,000-00 | 15,00,000-00 | 25,68,000-00 |
| 10. | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | 1,20,00,000-00 | - | 1,20,00,000-00 |
| 11. | ಸಿಬ್ಬಂದಿ ಸೌಕರ್ಯ ನಿಧಿ | 1,43,86,483-75 | 5,00,000-00 | 1,48,86,483-75 |
| 12. | ಸಾರ್ವಜನಿಕ ಒಳಿತು ನಿಧಿ | 16,91,000-00 | 1,09,000-00 | 18,00,000-00 |
| 13. | ಧರ್ಮ ನಿಧಿ | 2,14,763-23 | 71,337-00 | 2,86,100-23 |
| 14. | ಲಾಭಾಂಶ ಸಮನ್ವಯ ನಿಧಿ | 50,00,000-00 | - | 50,00,000-00 |
| 15. | ಕರಡು ಸಾಲದ ನಿಧಿ (ಆದಾಯ ತೆರಿಗೆ ಸೆಕ್ಷನ್ 36(1)) | 6,60,00,000-00 | - | 6,60,00,000-00 |
| 16. | ಜೂಬಿಲಿ ನಿಧಿ | 11,00,000-00 | 1,00,000-00 | 12,00,000-00 |
| 17. | ಸಿಬ್ಬಂಧಿಗಳ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣದ ಅವಕಾಶ | - | 5,00,000-00 | - |
| | ಒಟ್ಟು | **57,73,09,177-45** | **5,53,63,826-69** | **61,38,98,663-14** |

* ಪಾವತಿಸಬೇಕಾದ ಬಾಬ್ತುಗಳು

**11. ಆಯ-ವ್ಯಯ :**

2022-23ನೇ ಸಾಲಿನ ಅಂದಾಜು ಆಯವ್ಯಯವನ್ನು ಮಹಾಸಭೆಯ ಮಂಜೂರಾತಿಗಾಗಿ ಮಂಡಿಸಲಾಗಿದೆ.

**12. ಡಿವಿಡೆಂಡ್ :**

ಸದಸ್ಯರ ಷೇರು ಹಣದ ಮೇಲೆ ಶೇಕಡ 15 ರಂತೆ ಡಿವಿಡೆಂಡನ್ನು ವಾರ್ಷಿಕ ಮಹಾಸಭೆಯ ಅನುಮತಿ ಪಡೆದು ಸದಸ್ಯರಿಗೆ ಲಾಭವನ್ನು ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ.

**13. ಲೆಕ್ಕ ಪರಿಶೋಧನೆ :**

2021–22ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮೆ॥. ಚೇತನ್ ಪದಕಿ ಅಂಡ್ ಅಸೋಸಿಯೇಟ್ಸ್, ಧಾರವಾಡ ಇವರು ಪರಿಶೋಧನೆ ಮಾಡಿ ವರದಿ ಸಲ್ಲಿಸಿರುತ್ತಾರೆ. ಬ್ಯಾಂಕು ಈ ವರ್ಷವೂ ಸಹ "ಎ" ಆಡಿಟ್ ವರ್ಗದಲ್ಲಿ ಮುಂದುವರೆದಿದೆ.

2022–23ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಮೆ॥. ಚೇತನ್ ಪದಕಿ ಅಂಡ್ ಅಸೋಸಿಯೇಟ್ಸ್, ಧಾರವಾಡ ಇವರನ್ನು ಮತ್ತೊಂದು ಅವಧಿಗೆ ಮುಂದುವರೆಸಲಾಗಿದೆ.

**14. ಕಾರ್ಯನಿರ್ವಾಹಕ ಮಂಡಲಿ ಸಭೆಗಳು :**

ಈ ವರ್ಷದಲ್ಲಿ ಒಟ್ಟು 14 ಕಾರ್ಯನಿರ್ವಾಹಕ ಮಂಡಲಿಯ ಸಭೆಗಳು, 15 ಉಪಸಮಿತಿ ಸಭೆಗಳು ಹಾಗೂ 10 ವ್ಯವಸ್ಥಾಪನಾ ಮಂಡಲಿ ಸಭೆಗಳು ನಡೆದು, ಈ ಸಭೆಗಳಲ್ಲಿ ಎಲ್ಲಾ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಬ್ಯಾಂಕಿನ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ್ದಾರೆ.

**15.** 2022–23ನೇ ಸಾಲಿಗೆ ಬ್ಯಾಂಕು ರೂ. 1,079 ಕೋಟಿಯವರೆಗೂ ಬಾಹ್ಯ ಮೂಲಗಳಿಂದ ಸಾಲಗಳನ್ನು ಪಡೆಯಲು ಅವಕಾಶವಿರುತ್ತದೆ.

**16. 2022–23ನೇ ಸಾಲಿಗೆ ಉದ್ದೇಶಿಸಿರುವ ಕಾರ್ಯಕ್ರಮಗಳು :**

* ದಾವಣಗೆರೆ ನಗರದಲ್ಲಿ ನೂತನ ಶಾಖೆಯನ್ನು ಪ್ರಾರಂಭಿಸುವುದು.
* ಠೇವಣಾತಿಗಳನ್ನು ಮತ್ತು ಸಾಲಗಳನ್ನು ಹೆಚ್ಚಿಸಿ ಬ್ಯಾಂಕಿನ ಪ್ರಗತಿಯನ್ನು ಕಾಯ್ದುಕೊಳ್ಳುವುದು.
* ಗ್ರಾಸ್ ಎನ್.ಪಿ.ಎ. ಪ್ರಮಾಣವನ್ನು ಕಡಿಮೆ ಮಾಡುವುದು.
* ಬ್ಯಾಂಕಿನಲ್ಲಿ UPI ತಂತ್ರಜ್ಞಾನವನ್ನು ಆದ್ಯತೆ ಮೇರೆಗೆ ಅಳವಡಿಸಿಕೊಳ್ಳುವುದು.

## ಕೃತಜ್ಞತೆಗಳು ಹಾಗೂ ಅಭಿನಂದನೆಗಳು :–

ನಮ್ಮ ಬ್ಯಾಂಕಿನ ಪ್ರಗತಿಗೆ ಸಹಕರಿಸಿದ ಮಾನ್ಯ ಸದಸ್ಯರಿಗೆ, ಗ್ರಾಹಕರಿಗೆ, ಠೇವಣಿದಾರರಿಗೆ, ಅವಿರತವಾಗಿ ಶ್ರಮಿಸುತ್ತಿರುವ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೂ, ಲಕ್ಷ್ಮೀ ಠೇವಣಿ ಸಂಗ್ರಹಕಾರರಿಗೂ ಬ್ಯಾಂಕಿನ ಪ್ರಗತಿಯ ಸಾಧನೆಗೆ ಸೂಕ್ತ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಇಲಾಖಾ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಉಪನಿಬಂಧಕರು ದಾವಣಗೆರೆ ಜಿಲ್ಲೆ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ, ದಾವಣಗೆರೆ ಇವರಿಗೂ, ಲೆಕ್ಕ ಪರಿಶೋಧನಾ ಇಲಾಖೆಯವರಿಗೂ, ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧನೆ ಮಾಡಿದ ಚಾರ್ಟರ್ಡ್ ಅಕೌಂಟೆಂಟ್‌ರಾದ ಶ್ರೀ ಸತ್ಯನಾರಾಯಣ ಎ. ದಾವಣಗೆರೆ ಹಾಗೂ ಸಕಾಲದಲ್ಲಿ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧನೆ ಮಾಡಿದ ಮೆ॥ ಚೇತನ್ ಪದಕಿ ಅಂಡ್ ಅಸೋಸಿಯೇಟ್ಸ್, ಧಾರವಾಡ ಇವರಿಗೂ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು, ಮಾರಾಟಾಧಿಕಾರಿಗಳಾದ ಶ್ರೀಮತಿ ಹೆಚ್.ಆರ್. ಉಷಾ ಇವರಿಗೂ, ಕಾನೂನು ಸಲಹೆ ನೀಡುತ್ತಿರುವ ವಕೀಲರುಗಳಿಗೂ, ಬ್ಯಾಂಕಿಗೆ ಆಧಾರ ಮಾಡುವ ಸ್ಥಿರಾಸ್ತಿಗಳ ಮೌಲ್ಯಮಾಪನ ಮಾಡುತ್ತಿರುವ ಇಂಜಿನಿಯರ್‌ಗಳಿಗೂ, ಚಿನ್ನಾಭರಣಗಳ ಮೌಲ್ಯಮಾಪನ ಮಾಡುತ್ತಿರುವ ಮೌಲ್ಯಮಾಪಕರಿಗೂ, ದಾವಣಗೆರೆ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದವರಿಗೂ, ಜಿಲ್ಲಾ ಸಹಕಾರ ಯೂನಿಯನ್, ದಾವಣಗೆರೆ ಇವರಿಗೂ ನಾವು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ನಮ್ಮ ಬ್ಯಾಂಕಿನ ನಿವೃತ್ತ ವ್ಯವಸ್ಥಾಪಕರಾಗಿದ್ದ ಶ್ರೀ ಡಿ.ಇ. ಶಿವಶಂಕರ್ ಹಾಗೂ ಸಹಾಯಕ ಲೆಕ್ಕಾಧಿಕಾರಿಯಾಗಿದ್ದ ಶ್ರೀ ಕೆ. ಶಾಂತಕುಮಾರ್ ರವರು ದೈವಾಧೀನರಾಗಿದ್ದು ದಯಾಮಯನಾದ ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ವರದಿ ಸಾಲಿನಲ್ಲಿ ಬ್ಯಾಂಕಿನ ಹಿರಿಯ ವ್ಯವಸ್ಥಾಪಕರಾಗಿದ್ದ ಶ್ರೀಮತಿ ಎಮ್. ಎಮ್. ಜಯಶೀಲಾರವರು ನಿವೃತ್ತಿಯಾಗಿದ್ದು ಅವರುಗಳ ಸೇವೆ ಗಮನಾರ್ಹವಾಗಿರುತ್ತದೆ.

**ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾದ ಎಲ್ಲರಿಗೂ ನಮ್ಮ ಅನಂತ ಧನ್ಯವಾದಗಳು.**

ಕಾರ್ಯನಿರ್ವಾಹಕ ಮಂಡಲಿ ಪರವಾಗಿ
ಸಹಿ/–
**ಕೋಗುಂಡಿ ಬಕ್ಕೇಶಪ್ಪ**
ಅಧ್ಯಕ್ಷರು

## 2021–22ನೇ ಸಾಲಿನ ಆಯ–ವ್ಯಯಕ್ಕಿಂತ ಹೆಚ್ಚುವರಿ ಆದ ಖರ್ಚು ಮತ್ತು 2022–23ನೇ ಸಾಲಿನ ಅಂದಾಜು ಆಯ–ವ್ಯಯ ಪತ್ರಿಕೆ

| ಕ್ರ ಸಂ. | ವಿವರಗಳು | 2021–22ಕ್ಕೆ ಮಂಜೂರಾದ ಬಜೆಟ್ | 2021–22ಕ್ಕೆ ಖರ್ಚು ಆದದ್ದು | ಹೆಚ್ಚುವರಿಯಾದ ಖರ್ಚು | 2022–23ನೇ ಸಾಲಿನ ಅಂದಾಜು ಖರ್ಚು ರೂ. | 2022–23ನೇ ಸಾಲಿನ ಅಂದಾಜು ಆದಾಯ ರೂ. |
|---|---|---|---|---|---|---|
| 1. | ಸಿಬ್ಬಂದಿ ಸಂಬಳ, ಭವಿಷ್ಯ ನಿಧಿ ಮತ್ತು ಇತರೆ | 4,00,00,000–00 | 4,35,08,283–00 | 35,08,283–00 | 4,50,00,000–00 | – |
| 2. | ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹಿರಾತು | 6,00,000–00 | 1,54,475–00 | – | 6,00,000–00 | – |
| 3. | ಬಾಡಿಗೆ, ಕಂದಾಯ, ವಿದ್ಯುತ್ ಮತ್ತು ವಿಮೆ | 80,00,000–00 | 74,55,203–55 | – | 80,00,000–00 | – |
| 4. | ಅಂಚೆ, ತಂತಿ ಮತ್ತು ದೂರವಾಣಿ | 3,00,000–00 | 2,11,050–09 | – | 3,00,000–00 | – |
| 5. | ಪ್ರವಾಸ ಭತ್ಯೆ | 1,00,000–00 | 9,390–00 | – | 1,00,000–00 | – |
| 6. | ವಾರ್ಷಿಕ ಮಹಾಸಭೆಯ ವೆಚ್ಚ | 6,00,000–00 | 4,88,447–42 | – | 7,00,000–00 | – |
| 7. | ನಿರ್ದೇಶಕರ ಸಭೆಯ ವೆಚ್ಚ | 4,00,000–00 | 4,69,000–00 | – | 6,00,000–00 | – |
| 8. | ತನಿಖಾ ಶುಲ್ಕ ಮತ್ತು ಮಾರಾಟಾಧಿಕಾರಿಯವರ ವೇತನ | 15,00,000–00 | 13,41,983–00 | – | 15,00,000–00 | – |
| 9. | ಬಡ್ಡಿ ಮತ್ತು ಕಮೀಷನ್ | 28,00,00,000–00 | 27,70,03,657–82 | – | 30,00,00,000–00 | 32,00,00,000–00 |
| 10. | ಚಂದಾ ವಗೈರೆ | 2,00,000–00 | 1,13,453–99 | – | 2,00,000–00 | – |
| 11. | ನವೀಕರಣ ಮತ್ತು ದುರಸ್ತಿ | 20,00,000–00 | 6,47,521–53 | – | 20,00,000–00 | – |
| 12. | ಸವಕಳಿ | 50,00,000–00 | 34,85,278–49 | – | 45,00,000–00 | – |
| 13. | ಕಾನೂನು ಸಲಹೆ ವೆಚ್ಚ | 5,00,000–00 | 3,96,000–00 | – | 5,00,000–00 | – |
| 14. | ಲಕ್ಷ್ಮೀ ಠೇವಣಿ ಸಂಗ್ರಹಕಾರರ ಕಮೀಷನ್ | 40,00,000–00 | 38,82,306–00 | – | 40,00,000–00 | – |
| 15. | ಇತರೆ | 40,00,000–00 | 38,04,061–96 | – | 40,00,000–00 | 80,00,000–00 |
| 16. | ಕಂಪ್ಯೂಟರ್ ಮತ್ತು ಜೆರಾಕ್ಸ್ ನಿರ್ವಹಣೆ | 28,00,000–00 | 28,51,333–62 | 51,333–62 | 30,00,000–00 | – |
| 17. | ಸರಕು ಮತ್ತು ಸೇವಾ ತೆರಿಗೆ | – | 10,39,431–84 | – | – | – |
| 18. | ಗುಂತಾಯಿಸಿದ ಹಣದ ಮೇಲಿನ ಆದಾಯ | – | – | – | – | 13,20,00,000–00 |
| 19. | ಲಾಭ | 7,50,00,000–00 | 10,09,61,367–69 | – | 8,50,00,000–00 | – |
| | ಒಟ್ಟು | **42,50,00,000–00** | **44,78,22,245–00** | **35,59,616–62** | **46,00,00,000–00** | **46,00,00,000–00** |

## ದಿ ದಾವಣಗೆರೆ ಅರ್ಬನ್ ಕೋ-ಆಪ್.

ದಿನಾಂಕ : 31-03-2022ಕ್ಕೆ ಇದ್ದಂತೆ

| 31-03-2021 ರೂ. ಪೈ. | ಖರ್ಚು | 31-03-2022 ರೂ. ಪೈ. |
|---|---|---|
| 26,37,55,999-88 | ಠೇವಣಿಗಳ ಮತ್ತು ತಂದ ಸಾಲಗಳ ಮೇಲೆ ಕೊಟ್ಟ ಬಡ್ಡಿ | 27,70,03,657-82 |
| 3,94,59,673-00 | ಸಂಬಳ, ಭತ್ಯೆ, ಭವಿಷ್ಯ ನಿಧಿ ಮತ್ತು ಇತರೆ | 4,35,08,283-00 |
| 2,71,000-00 | ಆಡಳಿತ ಮಂಡಳಿಯ ಸದಸ್ಯರುಗಳ ಭತ್ಯೆ | 4,69,000-00 |
| 70,86,393-93 | ಬಾಡಿಗೆ, ತೆರಿಗೆಗಳು, ವಿಮೆ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | 74,55,203-55 |
| 3,85,000-00 | ಕಾನೂನು ಖರ್ಚುಗಳು | 3,96,000-00 |
| 1,62,958-97 | ಅಂಚೆ, ತಂತಿ ಮತ್ತು ದೂರವಾಣಿ ಖರ್ಚು | 2,11,050-09 |
| 12,90,078-00 | ಲೆಕ್ಕ ಪರಿಶೋಧಕರ ಮತ್ತು ಮಾರಾಟಾಧಿಕಾರಿಗಳ ಸಂಬಳ | 13,41,983-00 |
| 48,95,859-32 | ಆಸ್ತಿಗಳ ಮೇಲೆ ಸವಕಳಿ ಮತ್ತು ದುರಸ್ತಿ ಖರ್ಚು | 41,32,800-02 |
| 6,67,284-09 | ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹೀರಾತು | 1,54,475-00 |
| 37,94,860-00 | ಲಕ್ಷ್ಮಿ ಠೇವಣಿ ಸಂಗ್ರಹಕಾರರ ಕಮಿಷನ್ | 38,82,306-00 |
| 5,35,627-00 | ವಾರ್ಷಿಕ ಮಹಾಸಭೆಯ ಖರ್ಚು | 4,88,447-42 |
| 0-00 | ಎ.ಟಿ.ಎಂ. ಮತ್ತು ಕಂಪ್ಯೂಟರ್ ನಿರ್ವಹಣೆ | 28,37,249-62 |
| 41,71,932-88 | ಇತರೆ ಖರ್ಚುಗಳು | 39,40,989-95 |
| 57,06,250-27 | ಮುಂಗಡ ಆದಾಯ ತೆರಿಗೆ ಮತ್ತು ಮೂಲದಲ್ಲಿ ತೆರಿಗೆಗೆ ಅವಕಾಶ ಕಲ್ಪಿಸಿದ್ದು | 0-00 |
| 7,62,303-66 | ಸರಕು ಮತ್ತು ಸೇವಾ ತೆರಿಗೆಯ ಹೊಂದಾಣಿಕೆಯ ಬಾಬ್ತು | 10,39,431-84 |
| 20,86,290-00 | ಆದಾಯ ತೆರಿಗೆಯನ್ನು ಪಾವತಿಸಿದ್ದು | 0-00 |
| **9,19,46,187-80** | **ಲಾಭ (ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳಿಗೆ ವಜಾ ಮಾಡುವ ಮೊದಲು)** | **10,09,61,367-69** |
| **42,69,77,698-80** | **ಜುಮ್ಲಾ** | **44,78,22,245.00** |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | |
| | 1. ಆದಾಯ ತೆರಿಗೆಗೆ ಅವಕಾಶ | 2,08,66,212-00 |
| | 2. ಕರಡು ಸಾಲದ ನಿಧಿಗೆ ಅವಕಾಶ [ಆದಾಯ ತೆರಿಗೆ ಸೆ.36(1) (Viia)] | 81,22,589-00 |
| | 3. ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ-[ಸೆ.36(1)(Viii)] | 10,00,000-00 |
| | 4. ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 70,00,000-00 |
| | 5. ಆಡಿಟ್ ಫೀ ಪಾವತಿಯಾಗಬೇಕಾದದ್ದು | 3,50,000-00 |
| | 6. ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 60,58,740-00 |
| | 7. ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾದ್ಯತೆ ನಿಧಿ | 15,00,000-00 |
| **4,12,79,588-00** | | **4,55,97,541-00** |
| **5,06,66,599-80** | **ನಿವ್ವಳ ಲಾಭ** | **5,53,63,826-69** |
| **9,19,46,187-80** | **ಜುಮ್ಲಾ** | **10,09,61,367-69** |

**ಡಿ.ವಿ. ಆರಾಧ್ಯಮಠ**
ಪ್ರಧಾನ ವ್ಯವಸ್ಥಾಪಕರು

**ಅಂದನೂರು ಮುಪ್ಪಣ್ಣ**
ಉಪಾಧ್ಯಕ್ಷರು

**ಕೋಗುಂಡಿ ಬಕ್ಕೇಶಪ್ಪ**
ಅಧ್ಯಕ್ಷರು

**-: ಕಾರ್ಯನಿರ್ವಾಹಕ ಮಂಡಲಿ ಸದಸ್ಯರು :-**

**ಮುಂಡಾಸ್ ವೀರೇಂದ್ರ**
ಚಾರ್ಟರ್ಡ್ ಅಕೌಂಟೆಂಟ್, ವೃತ್ತಿಪರ ನಿರ್ದೇಶಕರು

**ಎಂ. ಚಂದ್ರಶೇಖರ್**
ನಿರ್ದೇಶಕರು

**ಪಿ.ಕೆ ಶಿವಾನಂದಪ್ಪ**
ನಿರ್ದೇಶಕರು

**ಬ್ಯಾಂಕ್ ಲಿ., ದಾವಣಗೆರೆ.**

**ಲಾಭ – ಹಾನಿ ಪತ್ರಿಕೆ**

| 31–03–2021 ರೂ. ಪೈ. | ಆದಾಯ | 31–03–2022 ರೂ. ಪೈ. |
|---|---|---|
| 29,06,56,528–56 | ಸಾಲ ಮತ್ತು ಮುಂಗಡಗಳ ಮೇಲೆ ಬಂದ ಬಡ್ಡಿ | 29,73,75,898–54 |
| 12,82,27,859–88 | ವಿನಿಯೋಗಗಳ ಮೇಲೆ ಬಂದ ಆದಾಯ | 14,13,81,658–04 |
| 80,93,310–36 | ಇತರೆ ಜಮಾಗಳು | 90,64,688–42 |
| **42,69,77,698–80** | ಜುಮ್ಲಾ | **44,78,22,245–00** |
| **9,19,46,187–80** | ಲಾಭ ಮೇಲಿನಂತೆ ಬಂದಂತೆ | **10,09,61,367–69** |
| **9,19,46,187–80** | ಜುಮ್ಲಾ | **10,09,61,367–69** |

ದಿನಾಂಕ : **23.06.2022**
ಸ್ಥಳ : ದಾವಣಗೆರೆ

ಸಹಿ/–
ಚೇತನ್ ಪದಕಿ
ಸನ್ನದು ಲೆಕ್ಕಪರಿಶೋಧಕರು
ಸದಸ್ಯತ್ವ ಸಂಖ್ಯೆ. 216929
ಪಾಲುದಾರರು
ಮೆ॥ ಚೇತನ್ ಪದಕಿ ಆಂಡ್ ಅಸೋಸಿಯೇಟ್ಸ್, ಧಾರವಾಡ
ಎಫ್.ಆರ್.ನಂ.011274S
UDIN : 22216929ALNLQA4343

## ದಿ ದಾವಣಗೆರೆ ಅರ್ಬನ್ ಕೋ–ಆಪ್.

ದಿನಾಂಕ : 31–03–2022ಕ್ಕೆ ಇದ್ದಂತೆ

| 31–03–2021 ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31–03–2022 ರೂ. ಪೈ. |
|---|---|---|---|
| **11,27,67,100–00** | **ಷೇರು ಬಂಡವಾಳ**<br>ವ್ಯಕ್ತಿಗತ ಮತ್ತು ಪಾಲುದಾರಿಕೆ ಸಂಸ್ಥೆಗಳಿಂದ<br>ರೂ. **100** ಮೌಲ್ಯದ **1174222** ಷೇರುಗಳು | | **11,74,22,200–00** |
| **52,91,83,708–65** | **ಆಪದ್ಧನ ಮತ್ತು ಇತರೆ ನಿಧಿಗಳು** | | **57,73,09,177–45** |
| **51,15,95,025–67** | | **55,88,48,930–47** | |
| 25,26,17,614–67 | ಆಪದ್ಧನ ನಿಧಿ | 26,83,48,930–47 | |
| 4,60,00,000–00 | ಕಟ್ಟಡ ನಿಧಿ | 4,60,00,000–00 | |
| 50,00,000–00 | ಲಾಭಾಂಶ ಸಮನ್ವಯ ನಿಧಿ | 50,00,000–00 | |
| 8,20,00,000–00 | ಕರಡು ಸಾಲದ ನಿಧಿ | 9,50,00,000–00 | |
| 5,78,77,411–00 | ಕರಡು ಸಾಲದ ನಿಧಿ [ಆದಾಯ ತೆರಿಗೆ ಸೆಕ್ಷನ್ 36(1)(viia)] | 6,00,00,000–00 | |
| 3,65,00,000–00 | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 3,65,00,000–00 | |
| 2,11,00,000–00 | ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 3,00,00,000–00 | |
| 1,05,00,000–00 | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | 1,20,00,000–00 | |
| **1,75,88,682–98** | **ಇತರೆ ನಿಧಿಗಳು ಮತ್ತು ಕಾಯ್ದಿರಿಸಿದ ನಿಧಿಗಳು** | **1,84,60,246–98** | |
| 1,37,67,879–75 | ಸಿಬ್ಬಂದಿ ಸೌಕರ್ಯ ನಿಧಿ | 1,43,86,483–75 | |
| 16,91,000–00 | ಸಾರ್ವಜನಿಕ ಒಳಿತು ನಿಧಿ | 16,91,000–00 | |
| 1,81,803–23 | ಧರ್ಮನಿಧಿ | 2,14,763–23 | |
| 9,48,000–00 | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 10,68,000–00 | |
| 10,00,000–00 | ಜುಬಿಲೀ ನಿಧಿ | 11,00,000–00 | |
| **434,52,96,943–35** | **ಠೇವಣಿಗಳು ಮತ್ತು ಇತರೆ ಖಾತೆಗಳು** | | **472,16,93,066–48** |
| **344,25,23,271–25** | **ಖಾಯಂ ಠೇವಣಿಗಳು** | **370,33,95,468–65** | |
| 341,25,27,611–25 | ವ್ಯಕ್ತಿಗಳಿಂದ | 368,85,82,487–65 | |
| 2,99,95,660–00 | ಇತರೆ ಸಂಸ್ಥೆಗಳಿಂದ | 1,48,12,981–00 | |
| **65,93,14,127–38** | **ಉಳಿತಾಯ ಠೇವಣಿಗಳು** | **71,98,94,288–89** | |
| 65,85,85,347–18 | ವ್ಯಕ್ತಿಗಳಿಂದ | 71,95,98,229–19 | |
| 7,28,780–20 | ಇತರೆ ಸಂಸ್ಥೆಗಳಿಂದ | 2,96,059–70 | |
| **24,26,79,575–77** | **ಚಾಲ್ತಿ ಠೇವಣಿಗಳು** | **29,79,51,440–94** | |
| 24,19,34,065–31 | ವ್ಯಕ್ತಿಗಳಿಂದ | 29,73,54,391–58 | |
| 7,45,510–46 | ಇತರೆ ಸಂಘಗಳಿಂದ | 5,97,049–36 | |
| **7,79,968–95** | **ಇತರೆ ಠೇವಣಿಗಳು** | **4,51,868–00** | |
| 7,79,968–95 | ವಾಯಿದೆ ಮೀರಿದ ಠೇವಣಿ | 4,51,868–00 | |
| **0–00** | **ಪಡೆದ ಸಾಲಗಳು** | | **0–00** |
| – | ಅಲ್ಪಾವಧಿ ಸಾಲಗಳು | – | |
| – | ಮಧ್ಯಮಾವಧಿ ಸಾಲಗಳು | – | |
| **0–00** | **ವಸೂಲಾಗತಕ್ಕ ಮತ್ತು ವಸೂಲಿಗೆ ಬಂದಿರುವ ಬಿಲ್ಲುಗಳು** | | **0–00** |
| **0–00** | **ಶಾಖೆಗಳ ಹೊಂದಾಣಿಕೆ** | | **14,88,755–28** |
| **6,32,53,733–98** | **ಕಟ್ಟುಬಾಕಿ ಬಡ್ಡಿ ಮೀಸಲು** | | **5,11,50,872–17** |
| **27,12,444–27** | **ಕೊಡಬೇಕಾದ ಬಡ್ಡಿ** | | **23,27,952–30** |
| **505,32,13,930–25** | **ಮುಂದಿನ ಪುಟಕ್ಕೆ** | | **547,13,92,023–68** |

## ಬ್ಯಾಂಕ್ ಲಿ., ದಾವಣಗೆರೆ.

ಅಢಾವೆ ಪತ್ರಿಕೆ

| 31-03-2021 ರೂ. ಪೈ. | ಸ್ವತ್ತು ಮತ್ತು ಆಸ್ತಿ | | 31-03-2022 ರೂ. ಪೈ. |
|---|---|---|---|
| **30,83,00,835-71** | **ನಗದು ಮತ್ತು ಇತರೆ ಬ್ಯಾಂಕಿನಲ್ಲಿರುವ ಶಿಲ್ಕು** | | **31,62,51,645-78** |
| **3,58,20,760-00** | ಬ್ಯಾಂಕಿನಲ್ಲಿರುವ ನಗದು | **2,90,80,078-00** | |
| | ಎಸ್.ಬಿ.ಐ. ಮತ್ತು ಇತರೆ ಸಮವರ್ತಿ ಬ್ಯಾಂಕುಗಳಲ್ಲಿ ಹಾಗೂ ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ | | |
| 6,00,36,871-71 | ಚಾಲ್ತಿ ಖಾತೆ | 6,47,00,281-78 | |
| 21,24,43,204-00 | ಖಾಯಂ ಠೇವಣಿ | 22,24,71,286-00 | |
| **71,81,62,969-74** | **ಇತರೆ ಬ್ಯಾಂಕಿನಲ್ಲಿ ಶಿಲ್ಕು** | | **55,99,06,071-12** |
| 13,91,63,169-74 | ಚಾಲ್ತಿ ಖಾತೆ | 18,04,06,071-12 | |
| 57,89,99,800-00 | ಖಾಯಂ ಠೇವಣಿ | 37,95,00,000-00 | |
| **0-00** | **ಕಾಲ್‌ಮನಿ ಹೂಡಿಕೆ** | | **0-00** |
| **129,86,95,814-00** | **ಸಂಚಯಗಳು** | | **162,70,60,673-00** |
| **97,84,93,314-00** | ಕೇಂದ್ರ/ರಾಜ್ಯ ಸರ್ಕಾರದ ಭದ್ರತಾ ಪತ್ರಗಳು | **122,68,58,173-00** | |
| 97,84,93,314-00 | ಪುಸ್ತಕ ಬೆಲೆ | 122,68,58,173-00 | |
| 97,00,00,000-00 | ಮುಖಬೆಲೆ | 123,01,20,000-00 | |
| 98,43,92,000-00 | ಮಾರುಕಟ್ಟೆ ಬೆಲೆ | 122,67,28,000-00 | |
| **2,02,500.-00** | ಸಹಕಾರಿ ಸಂಘಗಳ ಷೇರುಗಳು | **2,02,500-00** | |
| **32,00,00,000-00** | ಇತರೆ | **40,00,00,000-00** | |
| **268,82,51,653-58** | **ಸಾಲ ಮತ್ತು ಮುಂಗಡಗಳು** | | **296,61,51,912-92** |
| **128,18,24,923-64** | **ಅಲ್ಪಾವಧಿ ಸಾಲಗಳು ರೋಖ ಪತ್ರಗಳು ಓವರ್ ಡ್ರಾಫ್ಟ್‌ಗಳು** | **133,70,75,908-64** | |
| 127,51,23,221-06 | ಬಿಲ್ಲುಗಳು ಸೋಡಿ ಅವುಗಳಲ್ಲಿ ವಾಸ್ತವಿಕ ಭದ್ರತೆಗಳ ಮೇಲೆ | 133,19,74,973-64 | |
| 128,18,24,923-64 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 133,70,75,908-64 | |
| 4,93,97,383-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 2,20,99,549-00 | |
| **11,87,46,790-64** | **ಮಧ್ಯಮಾವಧಿ ಸಾಲಗಳು** | **11,35,15,558-05** | |
| 11,87,46,790-64 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 11,35,15,558-05 | |
| 11,87,46,790-64 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 11,35,15,558-05 | |
| 91,04,252-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 94,23,279-00 | |
| **128,76,79,939-30** | **ದೀರ್ಘಾವಧಿ ಸಾಲಗಳು** | **151,55,60,446-23** | |
| 128,76,79,939-30 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 151,55,60,446-23 | |
| 128,76,79,939-30 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 151,55,60,446-23 | |
| 1,09,85,035-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 95,09,852-00 | |
| **501,34,11,273-03** | **ಮುಂದಿನ ಪುಟಕ್ಕೆ** | | **546,93,70,302-82** |

## ದಿ ದಾವಣಗೆರೆ ಅರ್ಬನ್ ಕೋ-ಆಪ್.

ದಿನಾಂಕ : 31-03-2022ಕ್ಕೆ ಇದ್ದಂತೆ

| 31-03-2021 ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31-03-2022 ರೂ. ಪೈ. |
|---|---|---|---|
| 505,32,13,93-25 | ಹಿಂದಿನ ಪುಟದಿಂದ | | 547,13,92,023-68 |
| **4,86,76,066-93** | **ಇತರೆ ಜವಾಬ್ದಾರಿಗಳು** | | **5,40,13,411-96** |
| 10,97,924-68 | ಪಾವತಿಯಾಗಬೇಕಾಗಿದ್ದ ಹುಂಡಿಗಳು | 54,68,959-56 | |
| 13,79,278-00 | ಪಡೆಯದಿರುವ ಲಾಭಾಂಶ | 18,37,177-00 | |
| 14,56,870-31 | ಸಂಡ್ರಿ ಬಾಬ್ತುಗಳು | 14,70,631-00 | |
| 3,57,000-00 | ಆಡಿಟ್ ಫೀ ಪಾವತಿಯಾಗಬೇಕಾದದ್ದು | 3,51,000-00 | |
| 22,30,019-00 | ಆದಾಯ ತೆರಿಗೆ ಅವಕಾಶ | 0-00 | |
| 58,29,588-00 | ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 67,58,740-00 | |
| 2,89,17,000-00 | ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ | 2,99,17,000-00 | |
| 3,632-70 | ಬಿಲ್ಸ್ ಫಾರ್ ಕಲೆಕ್ಷನ್ | 3,632-70 | |
| 26,94,748-20 | ಟಿ.ಡಿ.ಎಸ್. ಪೇಯಬಲ್ | 42,30,551-70 | |
| 6,903-04 | ಸರಕು ಸೇವಾ ತೆರಿಗೆ | 2,99,731-00 | |
| 47,03,103-00 | ಸಿಬ್ಬಂದಿಗಳ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣದ ಅವಕಾಶ | 36,75,989-00 | |
| **5,06,66,599-80** | **ಲಾಭ-ನಷ್ಟ ಖಾತೆ** | | **5,53,63,826-69** |
| | ಕಳೆದ ವರ್ಷದ ಅಢಾವೆ ಪತ್ರಿಕೆ ಲಾಭ | 5,06,66,599-80 | |
| | ವಿನಿಯೋಗಿಸಿದ್ದು | 5,06,66,599-80 | |
| | **ಈ ಸಾಲಿನ ನಿವ್ವಳ ಲಾಭ** | **5,53,63,826-69** | |
| | **ಷರಾ : ಈ ಸಾಲಿನಲ್ಲಿ ಗಳಿಸಿದ ಲಾಭ** | **10,09,61,367-69** | |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | | |
| | 1. ಆದಾಯ ತೆರಿಗೆಗೆ ಅವಕಾಶ | 2,08,66,212-00 | |
| | 2. ಕರಡು ಸಾಲದ ನಿಧಿಗೆ ಅವಕಾಶ [ಆದಾಯ ತೆರಿಗೆ ಸೆ.36(1) (Viia)] | 81,22,589-00 | |
| | 3. ದೀರ್ಘಾವಧಿ ಸಾಲದ ಮೇಲೆ ಬಂದತಹ ಆದಾಯದ ಮೇಲೆ ಅವಕಾಶ [ಸೆ.36(1) (Viii)] | 10,00,000-00 | |
| | 4. ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 67,58,740-00 | |
| | 5. ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 70,00,000-00 | |
| | 6. ಆಡಿಟ್ ಫೀ ಪಾವತಿಯಾಗಬೇಕಾದದ್ದು | 3,50,000-00 | |
| | 7. ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾದ್ಯತಾ ನಿಧಿ | 15,00,000-00 | |
| | | **4,55,97,541-00** | |
| | **ನಿವ್ವಳ ಲಾಭ** | **5,53,63,826-69** | |
| **515,25,56,596-98** | **ಜುಮ್ಲಾ** | | **558,07,69,262-33** |
| **5,02,78,664-00** | **ಘಟನಾಪೇಕ್ಷ ಬಾಧ್ಯತೆಗಳು** | | **12,56,438-00** |
| | ಸ್ವೀಕಾರ ಸಮ್ಮತಿ ಲೇಖ ಮತ್ತು ಇತರೆ ಜವಾಬ್ದಾರಿಗಳು | | |
| 5,02,78,664-00 | ಆಧಾರ ಸಹಿತ | 12,56,438-00 | |
| 0-00 | ಆಧಾರ ರಹಿತ | 0-00 | |

ಬ್ಯಾಂಕ್ ಲಿ., ದಾವಣಗೆರೆ.

ಅಢಾವೆ ಪತ್ರಿಕೆ

| 31-03-2021 ರೂ. ಪೈ. | ಸ್ವತ್ತು ಮತ್ತು ಆಸ್ತಿ | | 31-03-2022 ರೂ. ಪೈ. |
|---|---|---|---|
| **501,34,11,273-03** | **ಹಿಂದಿನ ಪುಟದಿಂದ** | | **546,93,70,302-82** |
| **0-00** | **ವಸೂಲಾಗತಕ್ಕ ಮತ್ತು ವಸೂಲಿಗೆ ಕಳಿಸಿರುವ ಬಿಲ್ಲುಗಳು** | | **0-00** |
| **1,40,27,800-00** | ಕಟ್ಟಡಗಳು (ಸವಕಳಿ ತೆಗೆದು) | | **1,26,90,800-00** |
| **67,83,390-62** | ಪೀಠೋಪಕರಣಗಳು ಮತ್ತು ಮುಟ್ಟುಗಳು | | **66,13,900-00** |
| **6,32,53,733-98** | ಬರಬೇಕಾದ ಬಡ್ಡಿ | | **5,11,50,872-17** |
| **37,325-00** | ಶಾಖೆಗಳ ಹೊಂದಾಣಿಕೆ | | **0-00** |
| **5,50,43,074-35** | **ಇತರೆ ಆಸ್ತಿಗಳು** | | **4,09,43,387-34** |
| 21,55,400-00 | ಗಣಕ ಯಂತ್ರಗಳು (ಕಂಪ್ಯೂಟರ್) | 21,35,200-00 | |
| 3,30,422-00 | ಮುಂಗಡ ಖಾತೆ | 2,67,649-00 | |
| 18,649-49 | ದೂರವಾಣಿ ಖಾತೆ | 24,428-00 | |
| 4,85,83,264-00 | ತೊಡಗಣಿ ಮೇಲೆ ಬರಬೇಕಾದ ಬಡ್ಡಿ | 3,35,46,029-00 | |
| 90,000-00 | ಜೆರಾಕ್ಸ್ ಯಂತ್ರ | 76,000-00 | |
| 21,11,300-00 | ಮುದ್ರಣ ಮತ್ತು ಲೇಖನ ಸಾಮಗ್ರಿಗಳ ದಾಸ್ತಾನು | 23,25,381-25 | |
| 1,68,680-00 | ಕೆ.ಇ.ಬಿ. ಠೇವಣಿ | 1,68,680-00 | |
| 12,87,900-00 | ಯಂತ್ರೋಪಕರಣ | 20,77,700-00 | |
| 50,508-00 | ಇ-ಸ್ಟಾಂಪ್ ಠೇವಣಿ ಮತ್ತು ಮುಂಗಡ | 50,508-00 | |
| 1,84,500-00 | ಕಂಪ್ಯೂಟರ್ ತಂತ್ರಾಂಶ | 1,91,500-00 | |
| 0-00 | ಬಿ.ಬಿ.ಪಿ.ಎಸ್ ವ್ಯಾಲೆಟ್-ಡಿ.ಎನ್.ಎಸ್. ಬ್ಯಾಂಕ್ | 77,531-74 | |
| 0-00 | ಸಿ.ಕೆ.ವೈ.ಸಿ ವ್ಯಾಲೆಟ್ | 2,780-35 | |
| 62,450-86 | ಕೋವಿಡ್ 19 ಎಕ್ಸ್‌ಗ್ರೇಶಿಯಾ ಬರಬೇಕಾದದ್ದು | 0-00 | |
| **515,25,56,596-98** | **ಜುಮ್ಲಾ** | | **558,07,69,262-33** |
| **5,02,78,664-00** | **ಸಾದಿಲ್ವಾರು ಜವಾಬ್ದಾರಿ**<br>ಸಂಘಟಕ ಜವಾಬ್ದಾರಿ ಸ್ವೀಕೃತ ಮತ್ತು ಇತರೆ ಬಾಧ್ಯತೆ | | **12,56,438-00** |
| 5,02,78,664-00 | ಆಧಾರ ಸಹಿತ | 12,56,438-00 | |
| 0-00 | ಆಧಾರ ರಹಿತ | 0-00 | |

# ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ದಾವಣಗೆರೆ.

## ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಆಸ್ತಿ ಜವಾಬ್ದಾರಿ ತಃಖ್ತೆಗಳಿಗೆ ತೋರಿಸಿದ ಅಂಶಗಳ ಬಗ್ಗೆ ಟಿಪ್ಪಣಿಗಳು

1. ದಿನಾಂಕ **31-03-2022** ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk Weighted Asset Ratio) ಪ್ರಮಾಣವು ಶೇಕಡ **15.58** ರಷ್ಟು ಇರುವುದು.
2. ತೊಡಗಣಿಗಳ ಮುಖಬೆಲೆ ಪುಸ್ತಕಬೆಲೆ ಮತ್ತು ಮಾರುಕಟ್ಟೆ ಬೆಲೆಗಳನ್ನು ಆಧಾವೆ ಪತ್ರಿಕೆಯಲ್ಲಿ ನಮೂದಿಸಿದೆ.
3. (ಅ) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್‌ರವರಿಗೆ ಈ ಸಾಲಿನಲ್ಲಿ ಸಾಲವನ್ನು ಕೊಟ್ಟಿರುವುದಿಲ್ಲ.
   (ಆ) ಗೃಹನಿರ್ಮಾಣ/ಖರೀದಿ/ನವೀಕರಣ ಮುಂತಾದ ಉದ್ದೇಶಗಳಿಗೆ ಕೊಟ್ಟ ಸಾಲವು **ರೂ.1324.44** ಲಕ್ಷ ಇರುತ್ತದೆ.
4. ಷೇರು, ಡಿಬೆಂಚರ್‌ಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ.
5. ಅ) ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಮತ್ತು ಅವರ ಹತ್ತಿರದ ಸಂಬಂಧಿಗಳಿಗೆ ಭದ್ರತಾ ಆಧಾರಗಳ ಮೇಲೆ (ಠೇವಣಿ ಮೇಲೆ) ನೀಡಿರುವ ಸಾಲದ ಒಟ್ಟು ಮೊತ್ತವು ದಿನಾಂಕ **31-03-2022** ಕ್ಕೆ **ರೂ.572.91** ಲಕ್ಷ ಇರುತ್ತದೆ.
   ಆ) ಈ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಯಾವುದೇ ಆಧಾರ ರಹಿತ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ.
6. **2021-22ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಬಡ್ಡಿಯ ವೆಚ್ಚವು ಶೇಕಡಾ 6.35 ರಷ್ಟು ಇದೆ.**
7. **ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳು ಕೆಳಕಂಡಂತೆ ಇರುತ್ತದೆ.**

ರೂ. ಲಕ್ಷಗಳಲ್ಲಿ

| ದಿನಾಂಕ | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| | ಮೊಬಲಗು | ಶೇಕಡವಾರು | ಮೊಬಲಗು | ಶೇಕಡವಾರು |
| 31.03.2022 | 479.60 | 1.62% | -1130.40 | 0.00% |
| 31.03.2021 | 993.23 | 3.69% | -405.54 | 0.00% |
| **ವ್ಯತ್ಯಾಸ** | **-513.63** | **-2.07%** | **-724.86** | **0.00%** |

8. 2021-22ನೇ ಸಾಲಿನಲ್ಲಿ ಬ್ಯಾಂಕಿನ ಲಾಭಗಳಿಕೆ ಈ ಕೆಳಕಂಡಂತಿದೆ.
   * ಬ್ಯಾಂಕಿನ ಬಡ್ಡಿಯ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ **7.93** ರಷ್ಟು ಇರುತ್ತದೆ.
   * ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ **0.16** ರಷ್ಟು ಇರುತ್ತದೆ.
   * ಬ್ಯಾಂಕಿನ ಒಟ್ಟು ಗಳಿಕೆಯು ದುಡಿಯುವ ಬಂಡವಾಳದ ಮೇಲೆ ಶೇಕಡಾ **1.83** ರಷ್ಟು ಇರುತ್ತದೆ.
   * ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡಾ **1.05** ರಷ್ಟು ಇರುತ್ತದೆ.
   * ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ರೂ. **1182.75** ಲಕ್ಷ ಇರುತ್ತದೆ.
   * ನಿವ್ವಳ ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ. **8.52** ಲಕ್ಷ ಇದೆ.
9. ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಮ್‌ನ್ನು ದಿನಾಂಕ **21.05.2021** ಮತ್ತು **26.11.2021** ರಂದು ಒಟ್ಟು ರೂ. **62.93** ಲಕ್ಷ. ಡಿಪಾಜಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.
10. ಬ್ಯಾಂಕು ಸಾಲಾಂತ್ಯಕ್ಕೆ ಠೇವಣಾತಿ ಮತ್ತು ಭದ್ರತೆಗಳ ಆಧಾರದ ಮೇಲೆ ರೂ. **12.56** ಲಕ್ಷಗಳಿಗೆ ಬ್ಯಾಂಕ್ ಖಾತರಿ (Bank Guarantee)ಯನ್ನು ಕೊಟ್ಟಿರುತ್ತದೆ.
11. ಎನ್.ಪಿ.ಎ.:- ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತದೆ.

ರೂ. ಲಕ್ಷಗಳಲ್ಲಿ

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಭಾಧ್ಯತೆ ನಿಧಿ | ಗುಂತಾಯಿಸಿದ ಹಣದ ಮೇಲಿನ ಸವಕಳಿ ನಿಧಿ |
|---|---|---|---|
| 31.03.2022 | 1610.00 | 120.00 | 365.00 |
| 31.03.2021 | 1398.77 | 105.00 | 365.00 |
| **ವ್ಯತ್ಯಾಸ** | **211.23** | **15.00** | **0.00** |

12. ಡೆಫ್ ಖಾತೆಗೆ ವರ್ಗಾವಣೆಯಾಗಿರುವ ಮೊತ್ತ ರೂ. **102.41** ಲಕ್ಷ

| ಡಿ.ವಿ. ಆರಾಧ್ಯಮಠ | ಮುಂಡಾಸ್ ವೀರೇಂದ್ರ | ಎಂ. ಚಂದ್ರಶೇಖರ್ | ಪಿ.ಕೆ. ಶಿವಾನಂದಪ್ಪ | ಅಂದನೂರು ಮುಪ್ಪಣ್ಣ | ಕೋಗುಂಡಿ ಬಕ್ಕೇಶಪ್ಪ |
|---|---|---|---|---|---|
| ಪ್ರಧಾನ ವ್ಯವಸ್ಥಾಪಕರು | ಚಾರ್ಟರ್ಡ್ ಅಕೌಂಟೆಂಟ್, ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ಉಪಾಧ್ಯಕ್ಷರು | ಅಧ್ಯಕ್ಷರು |

## ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ

ನಾನು ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್., ದಾವಣಗೆರೆ ಇದರ ಕೇಂದ್ರ ಕಛೇರಿ ಮತ್ತು ಆರು ಶಾಖೆಗಳ (ಕ್ರೋಢೀಕೃತ) 2021-22ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ಇದಕ್ಕೆ ಸಂಬಂಧಪಟ್ಟ ಲೆಕ್ಕಪತ್ರದ ಪುಸ್ತಕಗಳು ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನನ್ನ ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಇದರ ಜೊತೆಗೆ ಲಗತ್ತಿಸಿರುವ ಆಸ್ತಿ ಜವಾಬ್ದಾರಿ ತಃಖ್ತೆ ಮತ್ತು ಲಾಭ ನಷ್ಟ ತಃಖ್ತೆಯು ದಿನಾಂಕ: 31-03-2022 ಕ್ಕೆ ಇದ್ದಂತೆ ನನ್ನ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತದೆಂದು ಧೃಡೀಕರಿಸುತ್ತೇನೆ.

ಸಹಿ/-
ಚೇತನ್ ಪದಕಿ
ಸನ್ನದು ಲೆಕ್ಕಪರಿಶೋಧಕರು
ಸದಸ್ಯತ್ವ ಸಂಖ್ಯೆ 216929
ಪಾಲುದಾರರು
ಮೆ॥ ಚೇತನ್ ಪದಕಿ ಅಂಡ್ ಅಸೋಸಿಯೇಟ್ಸ್, ಧಾರವಾಡ
ಎಫ್.ಆರ್.ನಂ.011274S UDIN : 22216929ALNLQA4343

ದಿನಾಂಕ 23-06-2022
ಸ್ಥಳ : ದಾವಣಗೆರೆ.

## ಉಪವಿಧಿಗಳ ತಿದ್ದುಪಡಿ

| ಉಪವಿಧಿ ಸಂಖ್ಯೆ | ಹಾಲಿ ಇರುವ ಉಪವಿಧಿ | ಉಪವಿಧಿ ಸಂಖ್ಯೆ | ತಿದ್ದುಪಡಿಗೆ ಪ್ರಸ್ತಾಪಿಸಿದ ತಿದ್ದುಪಡಿ | ತಿದ್ದುಪಡಿಗೆ ಕಾರಣ |
|---|---|---|---|---|
| 4(24) | **ಪದಗಳ ಅರ್ಥ ವಿವರಣೆ :**<br>'ಡೆಲಿಗೇಟ್' ಎಂದರೆ, ಇತರ ಸಹಕಾರ ಸಂಘಗಳಲ್ಲಿ ಬ್ಯಾಂಕನ್ನು ಪ್ರತಿನಿಧಿಸುವ ಬ್ಯಾಂಕಿನ ಒಬ್ಬ ನಿರ್ದೇಶಕ. | 4(24) | **ಪದಗಳ ಅರ್ಥ ವಿವರಣೆ :**<br>'ಡೆಲಿಗೇಟ್' ಎಂದರೆ, ಮಹಾಸಭೆಯಲ್ಲಿ ಭಾಗವಹಿಸುವ ಮತ್ತು ಮತಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಲಿಯಿಂದ ನೇಮಕವಾದ ಸಹಕಾರ ಸಂಘದ ನಿರ್ದೇಶಕ. | ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಿಗೆ ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಪ್ರಸ್ತಾಪಿಸಿದೆ. |
| 11 | **ಷೇರು ಹಣಕ್ಕೆ ಅರ್ಜಿ :**<br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶಧನವನ್ನು ಪಾವತಿಸತಕ್ಕದ್ದು ಅಂಥ ಷೇರು ಅರ್ಜಿಯನ್ನು ಮಂಡಲಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥ ಗೊಳಿಸತಕ್ಕದ್ದು | 11 | **ಷೇರು ಹಣಕ್ಕಾಗಿ ಅರ್ಜಿ :**<br>ಷೇರು ಪಡೆಯಲು ಅರ್ಜಿಯನ್ನು ಲಿಖಿತ ಮೂಲಕ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕನಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಕನಿಷ್ಠ ಹತ್ತು ಷೇರುಗಳ ಪೂರ್ಣ ಮೌಲ್ಯದೊಂದಿಗೆ ಪ್ರತಿ ಷೇರಿಗೆ ಹತ್ತು ರೂಪಾಯಿಗಳಂತೆ ಷೇರು ಶುಲ್ಕವನ್ನು ಮತ್ತು ಇಪ್ಪತ್ತೈದು ರೂಪಾಯಿಗಳ ಪ್ರವೇಶಧನವನ್ನು ಪಾವತಿಸತಕ್ಕದ್ದು ಅಂಥ ಷೇರು ಅರ್ಜಿಯನ್ನು ಮಂಡಲಿಯು ಅದು ಸ್ವೀಕೃತವಾದ ಎರಡು ತಿಂಗಳೊಳಗೆ ಇತ್ಯರ್ಥಗೊಳಿಸತಕ್ಕದ್ದು.<br>ಕಾಯ್ದೆ ಕಲಂ 22ರಲ್ಲಿ ನಮೂದಿಸಿದ ಘಟಕಗಳನ್ನು ಹೊರತುಪಡಿಸಿ ಬ್ಯಾಂಕಿನ ಯಾವುದೇ ಸದಸ್ಯನ ಬಿಟ್ಟು ಷೇರು ಬ್ಯಾಂಕಿನ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ ಐದರಷ್ಟನ್ನು ಮೀರತಕ್ಕದ್ದಲ್ಲ. | |
| 18(i) | **ಸದಸ್ಯನ ಕರ್ತವ್ಯಗಳು :**<br>ಬ್ಯಾಂಕಿನ ಯಾರೇ ಸದಸ್ಯನು –<br>ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ನೌಕರನಾಗಿರತಕ್ಕದ್ದಲ್ಲ; | 18(i) | **ಸದಸ್ಯನ ಕರ್ತವ್ಯಗಳು :**<br>ಬ್ಯಾಂಕಿನ ಯಾರೇ ಸದಸ್ಯನು –<br>ಬ್ಯಾಂಕಿನ ಅಥವಾ ಅದರ ಹಣಕಾಸು ಸಂಸ್ಥೆಯ ಅಥವಾ ಅದರ ಒಕ್ಕೂಟ ಅಥವಾ ಅದರ ಸಂಯುಕ್ತ ಸಂಘದ ನೌಕರನಾಗಿರತಕ್ಕದ್ದಲ್ಲ; | |
| 19(3) | **ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು :**<br>ಬ್ಯಾಂಕಿನ ಸದಸ್ಯನು ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 3 ಸಭೆಗಳಿಗೆ ಹಾಜರಾಗದಿದ್ದಲ್ಲಿ ಅಥವಾ ಮೂರು ನಿರಂತರ ಸಹಕಾರ ವರ್ಷಗಳವರೆಗೆ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳಲು ತಪ್ಪಿದ್ದಲ್ಲಿ, ಅಂಥ ಸದಸ್ಯನು ಮೂರು ವರ್ಷಗಳ ಅವಧಿಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | 19(3) | **ಸದಸ್ಯನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು :**<br>ಬ್ಯಾಂಕಿನ ಒಬ್ಬ ಸದಸ್ಯನು ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗದಿದ್ದಲ್ಲಿ ಅಥವಾ ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂಥ ಸದಸ್ಯನು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ. | |
| 43(5)<br><br>(ಇ)<br><br>(ಎಫ್) | **ಮತ ನೀಡಿಕೆ :**<br>ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ<br>ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಮೂರು ವರ್ಷಗಳ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.<br>ಮೂರು ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪವಿಧಿಗಳಲ್ಲಿ ಪ್ರತಿ ವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಮೂರು ವರ್ಷಗಳ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | 43(5)<br><br>(ಇ)<br><br>(ಎಫ್) | **ಮತ ನೀಡಿಕೆ :**<br>ಈ ಕೆಳಕಂಡ ಸದಸ್ಯರಿಗೆ ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ;<br>ಯುಕ್ತವಾಗಿ ತಿಳಿಸಲಾದ ಕಳೆದ 5 ಸಾಮಾನ್ಯ ಸಭೆಗಳ ಪೈಕಿ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗಲು ತಪ್ಪುವ ಸದಸ್ಯರಿಗೆ ಒಂದು ವರ್ಷದವರೆಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ.<br>ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಸದಸ್ಯರಿಗೆ ಒಂದು ವರ್ಷದ ಅವಧಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. | |
| 53(1) | **ಮಂಡಲಿಯತೆರವಾದ ಸ್ಥಾನಗಳು :**<br>ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. | 53 (1) | **ಮಂಡಲಿಯ ತೆರವಾದ ಸ್ಥಾನಗಳು :**<br>ಮಂಡಲಿಯ ಉಳಿದ ಪದಾವಧಿಯು ಆದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ, ಸಹಕಾರ ಚುನಾವಣಾ ಪ್ರಾಧಿಕಾರ ನಿರ್ದೇಶಕರ ಪದದಲ್ಲಿನ ಯಾವುದೇ ಖಾಲಿ ಸ್ಥಾನವನ್ನು ಭರ್ತಿಮಾಡಲು ಚುನಾವಣೆಯನ್ನು ನಡೆಸುವ ಜವಾಬ್ದಾರಿ ಹೊಂದಿರತಕ್ಕದ್ದು. ಪರಂತು ಮಂಡಳಿಯ ಅಂತಹ ಖಾಲಿ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ, ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು. | |
| 63.7 (i) | **ವೈದ್ಯಕೀಯ ಮರುಪೂರ್ಣ ವೆಚ್ಚ**<br>**ವೈದ್ಯಕೀಯ ವೆಚ್ಚಗಳು**<br>ಉದ್ಯೋಗಿಗಳ ವೈದ್ಯಕೀಯ ವೆಚ್ಚಗಳನ್ನು ಮರುಪೂರ್ಣ ಮಾಡಲು ಕರ್ನಾಟಕ ಸರ್ಕಾರ, ಸಹಕಾರ ಇಲಾಖೆ, ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ ಅಡಿಯಲ್ಲಿ ಬರುವ ಖಾಯಿಲೆಗಳಿಗೆ ಯಥಾರೀತಿ ಸಿಬ್ಬಂದಿಗಳಿಗೆ ವೈದ್ಯಕೀಯ ವೆಚ್ಚದಲ್ಲಿ ಶೇ.90 ಮತ್ತು ಅವನ/ಅವಳ ಕುಟುಂಬದ ಸದಸ್ಯರ ವೈದ್ಯಕೀಯ ವೆಚ್ಚದಲ್ಲಿ ಶೇ.60ನ್ನು ವೈದ್ಯಕೀಯ ಮರುಪೂರ್ಣ ವೆಚ್ಚವನ್ನು ಪಾವತಿಸುವುದು. | 63.7 (i) | **ವೈದ್ಯಕೀಯ ಮರುಪೂರ್ಣ ವೆಚ್ಚ :**<br>**ವೈದ್ಯಕೀಯ ವೆಚ್ಚಗಳು**<br>ಬ್ಯಾಂಕಿನ ಉದ್ಯೋಗಿಗಳ ವೈದ್ಯಕೀಯ ವೆಚ್ಚಗಳನ್ನು ಮರುಪೂರ್ಣ ಮಾಡಲು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸೇವಾ ನಿಯಮಾವಳಿಗಳಲ್ಲಿ ನೀಡಿರುವ ಸೌಲಭ್ಯಗಳಂತೆ ಬ್ಯಾಂಕಿನ ಸಿಬ್ಬಂದಿಗಳಿಗೆ ವೈದ್ಯಕೀಯ ವೆಚ್ಚದಲ್ಲಿ ಶೇ 90 ಮತ್ತು ಅವನ/ಅವಳ ಕುಟುಂಬದ ಸದಸ್ಯರ ವೈದ್ಯಕೀಯ ವೆಚ್ಚದಲ್ಲಿ ಶೇ 60ನ್ನು ಮರುಪೂರ್ಣ ವೆಚ್ಚವನ್ನು ಪಾವತಿಸುವುದು. | ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸೇವಾ ನಿಯಮಾವಳಿಗಳ ಪ್ರಕಾರ ತಿದ್ದುಪಡಿ ಪ್ರಸ್ತಾಪಿಸಿದೆ. |

## ಸದಸ್ಯರ ಗಮನಕ್ಕೆ

* ಪ್ರತಿಯೊಬ್ಬ ಸದಸ್ಯರು ಉಳಿತಾಯ/ಚಾಲ್ತಿ ಖಾತೆಯನ್ನು ತೆರೆಯಬೇಕು
* ಸದಸ್ಯರಿಂದಲೇ ಸಂಸ್ಥೆಯು ಬೆಳೆಯುವುದು ಮತ್ತು ಸಂಸ್ಥೆಯ ಸಹಾಯದಿಂದ ಸದಸ್ಯರ ಆರ್ಥಿಕ ಬೆಳವಣಿಗೆ ಹೊಂದುವುದು ಇದು ಪರಸ್ಪರ ಸಹಕಾರದಿಂದ ಮಾತ್ರ ಸಾಧ್ಯ. ಪರಸ್ಪರ ಸಹಕಾರದಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಆರೋಗ್ಯಕರ ಬೆಳವಣಿಗೆ ಸಾಧ್ಯ
* ಸಾಲದ ಅರ್ಜಿಯ ಜೊತೆಗೆ ಅವಶ್ಯಕ ದಾಖಲಾತಿಗಳನ್ನು ಒದಗಿಸಬೇಕು ಹಾಗೂ ಅರ್ಜಿಯಲ್ಲಿ ಪೂರ್ಣ ಮಾಹಿತಿ ನೀಡಬೇಕು ಇದರಿಂದ ಸಾಲದ ಅರ್ಜಿಯ ಪರಿಶೀಲನೆಗೆ ಹಾಗೂ ಸೇವೆಗೆ ಸಹಕಾರಿಯಾಗುತ್ತದೆ.
* ಬ್ಯಾಂಕಿನ ಉಪವಿಧಿಗಳಲ್ಲಿ ಆದ ಬದಲಾವಣೆಯ ಪ್ರಕಾರ ಸದಸ್ಯರು ಕನಿಷ್ಠ ಷೇರು ಮೊತ್ತ ರೂ 1000.00 ಹೊಂದಬೇಕಾಗಿರುವುದು ಅತಿ ಅವಶ್ಯಕವಿದ್ದು ಕಡಿಮೆ ಷೇರು ಹೊಂದಿರುವ ಸದಸ್ಯರು ಕೂಡಲೇ ಷೇರು ಹಣವನ್ನು ಪಾವತಿ ಮಾಡಬೇಕಾಗಿ ಕೋರಿದೆ
* ಪ್ರತಿಯೊಬ್ಬ ಜಾಮೀನುದಾರರು ಸಾಲಗಾರರಷ್ಟೆ ತಾವು ಜಾಮೀನಾದ ಬ್ಯಾಂಕಿನ ಸಾಲದ ಮೊತ್ತಕ್ಕೆ ಜವಾಬ್ದಾರರಾಗಿರುತ್ತಾರೆ. ಸದಸ್ಯರು ಜಾಮೀನು ಆಗುವ ಪೂರ್ವದಲ್ಲಿ ಸಾಲಗಾರರ ಸಾಂಪತ್ತಿಕ ಸ್ಥಿತಿ, ಸಾಲದ ಉದ್ದೇಶ, ಸಾಲ ಮರುಪಾವತಿಸುವ ಶಕ್ತಿ, ಇವುಗಳ ಬಗ್ಗೆ ತಿಳಿದುಕೊಳ್ಳುವುದು ಹಾಗೂ ನಿಗದಿಯಾದ ಕಾಲಕ್ಕೆ ಸಾಲಗಾರನು ಸಾಲವನ್ನು ಸರಿಯಾಗಿ ಮರುಪಾವತಿಮಾಡಲು ಕೋರಿದೆ.
* ಆರ್.ಬಿ.ಐ. ನಿರ್ದೇಶನದ ಪ್ರಕಾರ ಸಿ–ಕೆ.ವೈ.ಸಿ. ಪದ್ಧತಿಯು ಜಾರಿಯಲ್ಲಿದ್ದು ಬ್ಯಾಂಕಿನ ಗ್ರಾಹಕರು ಯಾವುದೇ ಖಾತೆ / ಸದಸ್ಯತ್ವ ಹೊಂದಬೇಕಿದ್ದಲ್ಲಿ ಪಾನ್ ಅಥವಾ ಆಧಾರ್ ಕಾರ್ಡ್‌ನಲ್ಲಿರುವಂತೆಯೇ ತಮ್ಮ ಹೆಸರನ್ನು ನಮೂದಿಸಿ ಖಾತೆ / ಸದಸ್ಯತ್ವ ಪ್ರಾರಂಭಿಸತಕ್ಕದ್ದು ಹಾಗೂ ಹಾಲಿ ಖಾತೆ ಹೊಂದಿರುವ ಗ್ರಾಹಕರು ಕೂಡ ದಾಖಲಾತಿ ಒದಗಿಸಿ ಇದರಂತೆ ಸರಿಪಡಿಸಿಕೊಳ್ಳತಕ್ಕದ್ದು.
* ಬ್ಯಾಂಕಿನಿಂದ ತುರ್ತು ಸೇವೆಗಳನ್ನು ಪಡೆಯಲು ಮಾನ್ಯ ಸದಸ್ಯರು / ಗ್ರಾಹಕರು ತಮ್ಮ ಇ–ಮೇಲ್ ಐಡಿಯನ್ನು ಕೂಡಲೇ ಒದಗಿಸಲು ಕೋರಿದೆ.
* ಡಿವಿಡೆಂಡ್ ಪಡೆಯಲು ವಿನಂತಿ :– ಮಾನ್ಯ ಸದಸ್ಯರು 2018–19ನೇ ಸಾಲಿನ ಡಿವಿಡೆಂಡನ್ನು ಈವರೆಗೂ ಪಡೆಯದೇ ಇದ್ದಲ್ಲಿ ದಿನಾಂಕ 31–03–2023 ರೊಳಗಾಗಿ ಪಡೆಯಲು ಸೂಚಿಸಿದೆ. ತಪ್ಪಿದಲ್ಲಿ 2018–19ನೇ ಸಾಲಿನ ಪಡೆಯದೇ ಇರುವ ಡಿವಿಡೆಂಡನ್ನು ಬ್ಯಾಂಕಿನ ಉಪವಿಧಿ ನಂ. 106ರ ಪ್ರಕಾರ ಮೀಸಲು ನಿಧಿಗೆ ವರ್ಗಾಯಿಸಲಾಗುವುದು.
* ರಿಸರ್ವ್ ಬ್ಯಾಂಕಿನ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಬ್ಯಾಂಕಿನಲ್ಲಿ ಹಾಲಿ ಉಳಿತಾಯ/ಚಾಲ್ತಿ ಖಾತೆಗಳನ್ನು ಹೊಂದಿರುವ ಗ್ರಾಹಕರು ಕಡ್ಡಾಯವಾಗಿ ತಮ್ಮ ಖಾತೆಯಲ್ಲಿ ವ್ಯವಹರಿಸಬೇಕು. ಇಲ್ಲವಾದಲ್ಲಿ ಎರಡು ವರ್ಷಕ್ಕೆ ಮೇಲ್ಪಟ್ಟ ಅವಧಿಯಾದರೆ ವ್ಯವಹಾರವಿಲ್ಲದ ಖಾತೆಯೆಂದು ವರ್ಗೀಕರಿಸಲಾಗುತ್ತದೆ. ಹಾಗೂ ಹತ್ತು ವರ್ಷ ಮೇಲ್ಪಟ್ಟ ವ್ಯವಹಾರವಿಲ್ಲದ ಖಾತೆಗಳನ್ನು ರಿಸರ್ವ್ ಬ್ಯಾಂಕಿನ ಡಿ.ಇ.ಎ ಫಂಡ್ ಖಾತೆಗೆ ವರ್ಗಾವಣೆ ಮಾಡಲಾಗುತ್ತದೆ.

**ಅತಿ ಕಡಿಮೆ ಬಡ್ಡಿ ದರದಲ್ಲಿ ಶೀಘ್ರವಾಗಿ ಸಾಲ ಸೌಲಭ್ಯಗಳು ದೊರೆಯುತ್ತವೆ.**
**ಮಾಹಿತಿಗಾಗಿ ನಮ್ಮ ಬ್ಯಾಂಕಿನ ಶಾಖೆಗಳಿಗೆ ಭೇಟಿ ಕೊಡಿ.**

**ಸಹಕಾರಂ ಗೆಲ್ಗೆ – ಸಹಕಾರಂ ಬಾಳ್ಗೆ**

# ಆಡಳಿತಾಧಿಕಾರಿಗಳು



**ಶ್ರೀ ಡಿ.ವಿ. ಆರಾಧ್ಯಮಠ**
ಪ್ರಧಾನ ವ್ಯವಸ್ಥಾಪಕರು



**ಶ್ರೀ ಬಿ.ಎಸ್. ಮಲ್ಲೇಶ್**
ಉಪ ಪ್ರಧಾನ ವ್ಯವಸ್ಥಾಪಕರು



**ಶ್ರೀ ಆರ್.ಎ. ಪ್ರಸನ್ನ**
ವ್ಯವಸ್ಥಾಪಕರು
ಸಾಲವಿಭಾಗ, ಆಡಳಿತ ಕಛೇರಿ



**ಶ್ರೀ ಸಾನಂದ ಗಣೇಶ್**
ವ್ಯವಸ್ಥಾಪಕರು
ಪ್ರಧಾನ ಕಛೇರಿ



**ಶ್ರೀ ಜಿ.ಕೆ. ವಿಜಯ್‌ಕುಮಾರ್**
ವ್ಯವಸ್ಥಾಪಕರು
ಚೌಕಿಪೇಟೆ ಶಾಖೆ



**ಶ್ರೀ ಕೆ. ಎಸ್. ಕರಿಬಸವರಾಜ್**
ಪ್ರಭಾರ ವ್ಯವಸ್ಥಾಪಕರು
ಎನ್.ಆರ್ ರೋಡ್ ಶಾಖೆ



**ಶ್ರೀಮತಿ ಎಲ್. ಎಸ್. ಗೀತಾ**
ವ್ಯವಸ್ಥಾಪಕರು
ಪಿ.ಜೆ. ಬಡಾವಣೆ ಶಾಖೆ



**ಶ್ರೀ ಹೆಚ್.ವಿ. ರುದ್ರೇಶ್**
ವ್ಯವಸ್ಥಾಪಕರು
ದೇವರಾಜ ಅರಸ್
ಬಡಾವಣೆ ಶಾಖೆ



**ಶ್ರೀ ಹೆಚ್. ಕುಮಾರ್**
ಪ್ರಭಾರ ವ್ಯವಸ್ಥಾಪಕರು
ಹೊನ್ನಾಳಿ ಶಾಖೆ



**ಶ್ರೀ ಬಿ.ಎಸ್. ಪ್ರಶಾಂತ್–CISA**
(Certified Information Systems Auditor)
ಡಿ.ಬಿ.ಎ.
ಆಡಳಿತ ಕಛೇರಿ

## OUR BRANCHES

| | | | |
|---|---|---|---|
| Head Office (GM) | : 231155 | N.R. Road, Branch | : 272544 |
| Head Office (Loans) | : 272540 | P.J. Extension Branch | : 272546 |
| Head Office (Banking) | : 272541 | Devaraj Urs Layout Branch | : 272547 |
| Chowkipet Branch | : 272543 | Honnali Branch (08188) | : 251905 |

## : ಸಾಲ ಸೌಲಭ್ಯಗಳು :

| | | | |
|---|---|---|---|
| ಗೃಹ ನಿರ್ಮಾಣ ಸಾಲ | : 8% | ವೇತನ ಆಧಾರಿತ ಸಾಲ | : 12% |
| ವಾಹನ ಸಾಲ | : 8% | ಮಾಲು ಆಧಾರದ ಸಾಲ | : 13% |
| ಆಭರಣ ಆಧಾರ ಸಾಲ | : 8.5% | ಯಂತ್ರೋಪಕರಣ ಸಾಲ | : 11% |
| ಓವರ್ ಡ್ರಾಫ್ಟ್ ಸಾಲ | : 11% | ಸ್ಥಿರಾಸ್ಥಿ ಸಾಲ | : 10.5% |

ವಿಶೇಷ ಸೂಚನೆ : * ರೂ.2.00 ಕೋಟಿ ಮೇಲ್ಪಟ್ಟ ಎಲ್ಲಾ ಸಾಲಗಳಿಗೆ ಶೇ 10 ರಷ್ಟು ಬಡ್ಡಿ ದರ ಅನ್ವಯವಾಗುತ್ತದೆ.
* ಪ್ರತಿ ತಿಂಗಳು ಸರಿಯಾಗಿ ಪಾವತಿಸಿದ್ದಲ್ಲಿ ಶೇ 2% ರಷ್ಟು ರಿಯಾಯಿತಿ ಸೌಲಭ್ಯವಿರುತ್ತದೆ.

**ಹೆಚ್ಚಿನ ಭದ್ರತೆ ಹಾಗೂ ಕಡಿಮೆ ಬಾಡಿಗೆಯೊಂದಿಗೆ ಲಾಕರ್ ಸೌಲಭ್ಯ.**
**ಆಭರಣ ಸಾಲವು ಶೀಘ್ರ ಹಾಗೂ ಕಡಿಮೆ ಬಡ್ಡಿ ದರದಲ್ಲಿ ದೊರೆಯುತ್ತದೆ.**

**Book-Post**

To,

S.S. Printers, Dvg.


SINCE 1962
DAVANGERE URBAN CO-OPERATIVE BANK LTD.

**THE DAVANGERE URBAN CO-OPERATIVE BANK LTD.,**
**Head Office :** Post Box No. 217, Near Gandhi Circle, P.B. Road, Davangere-577 002.
: 08192-272540, 272541 : www.ducbank.com : ducbank@ducbank.com